ತ . . . . ಸೋದದಿಂಪ್ರಿ
ಥ್ವೀರಾಜ್ಯಂಗೆಯ್ಯುತ್ತಮಿರೆತತ್ಪಾದಪದ್ಮೋಪಜೀವಿ . . . . .
. . . . ತೆರವಡಿಗಂಡದಾಯಿಗಸಂನೆಗಾಟಿ . . .
ತುಂಗಚೋಳಕ . ರಣ . . . ಪ್ಪ . ನಿಗಾಟಿ . . .
. ವೆನಾಯಕಿತಿಗಂಸುಪುತ್ರಕುಲೋತ್ತಮಂಮಾಚಿಯಂಣ
ನಪ್ಪಹೊಯ್ಸ . . ಮಂ . ಣದಯಂಗಾಯ್ಯದಾರನೆವಂ
. ತೆಯಂಮು . . . ರುಹಡವಿಲೆ . . . . ವಿಜಯರಾ
ಜೇಂದ್ರಚೋಳ . ಕ್ಕರನಾಡಾಳ್ವವೈರಿಮದಗಜ . ವಗನ್ನೆ
ಯಬೆಡಿನಿಸಾಲಿಯದೊಡೆಯ . . . . . . ದಮುದನಲ
ಕಾದುದ್ದರಗಾಳಂ || ಈವೆಡೆಗೆಕರ್ಣ್ನ . . . ಳಹಗೆಕಾವೆಡೆಗೆ
ರಿಯೊಜ್ಜತೆಸೇನಂಮಿಗೆ . . ದೇವೇಂದ್ರನಂದನಂಸಕಳಾವನಿ
ಯೊಳುಕುಕ್ಕರನಾಡಾಳ್ವಶ್ರೀಯಾಬೆಯಬೂಕ . . . .
. ಮತ್ತಗಜಕೇಸರಿ . . . ದುಗ್ರಂಶಿವಪಾದಶೇಖರಂಶರಣಾ
. . ಂತಿರನುಡಿಗಳಂ . . ಡದ್ದರಗಾಳಂವಿಜಯರಾಜೇಂದ್ರಚೋಳರುಕೆ
. . ವಿಶುದ್ಧಕೀರ್ತ್ತಿನಿವಾಸನಪ್ಪಹೊಯ್ಸಳ . . . ಮುಂಡಕಬ್ಬ
. . . ಬಿದು . . ಕಣಿ . ಡಗಂಗವಾಡಿಸಾವಿಮಲೆ
. . . .ಗಸಖವರಿಷ ೧೦೪೧ ನೆಯವಿಕಾರಿಸಂವತ್ಸರ
. . . . . . ೫ ಸೋಮವಾರರೋಹಿಣೇ . . . . ಚಂಕನವಲ

(ಮುಂದೆ ಕಾಣುವದಿಲ್ಲ.)

273

ಅದೇ ಹೋಬಳಿ ಮದನೆ ಗ್ರಾಮದ ಊರುಬಾಗಲಲ್ಲಿ.

ಪ್ರಮಾಣ 5′ × 2′ 8″.

1ಶ್ರೀಶಕವರ್ಷ ೧೫೯೫ ನೆಯಪರಿಧಾವಿಸಂವ
2ತ್ಸರದಪುಷ್ಯಶುದ್ಧ ೧೦. ಯಲ್ಲಿಶ್ರೀಮತುಮ್ಮೈ
3ಸೂರದೇವರಾಜವೊಡೆಯರುಬೆಳುಗಳದ
4ಚಾರುಕೀರ್ತ್ತಿಪಂಡಿತಾಚಾರ್ಯ್ಯರದಾ
5ನಶಾಲೆಯಜೈನಸನ್ಯಾಸಿಗಳಿಗೆನಿತ್ಯ
6ಅಂನದಾನಕ್ಕೆಸರ್ವ್ವಮಾನ್ಯವಾಗಿಧಾರಾ
7ದತ್ತವಾಗಿಕೊಟ್ಟಮದಣಿಗ್ರಾಮ
8ವುಮಂಗಲಮಹಾಶ್ರೀಶ್ರೀಶ್ರೀ ||

HOLE-NARSIPUR TALUQ.

ಹೊಳೇ ನರಸೀಪುರ ತಾಲೂಕು.

1

ಹೊಳೇನರಸೀಪುರದ ಕೋಟೆಯಲ್ಲಿ ಪ್ರೊಕ್ಕರಣೆಯ ಸೋಪಾನದ
ಬಳಿ ಪೂರ್ವದಿಕ್ಕಿನಲ್ಲಿ ನಟ್ಟಿರುವ ಕಲ್ಲು.

ಪ್ರಮಾಣ 3′ × 1′ 6″.

[1]ಶುಭಮಸ್ತುಸ್ವಸ್ತಿಶ್ರೀವಿಜಯಾಭ್ಯು
[2]ದಯಶಾಲಿವಾಹನಶಕವರು
[3]ಷಂಗಳು ೧೫೬೧ ನೇಸಲುವವಿಕಾ
[4]ರಿಸಂವತ್ಸರದಜೇಷ್ಟ ಶು . . .
[5]ಶ್ರೀಮತ್ಕಾಶ್ಯಪಗೋತ್ರ
[6]ದಬಯುಪನಾಯಕರ
[7]ವರಕ್ರಿಷ್ಣಪನಾಯಕನವ
[8]ರವೆಂಕಟಾದ್ರಿನಾಯಕರವ
[9]ರಪೌತ್ರರಾದಲಕ್ಷ್ಮಪ್ಪನಾ
[10]ಯಕರವರಪುತ್ರರಾದನ
[11]ರಸಿಂಹನಾಯಕರಯ್ಯನ
[12]ವರುತಮಿಗೆಶ್ರೀಯೋಭಿವೃಧಿ
[13]ಆಗಬೇಕುಯೆಂದುಸಕಲ
[14]ಶುಭದಗಳಾಗಬೇಕೆಂದುಕೊ
[15]ಳವಕಟ್ಟಿಶಿಯಿಾಕೊಳಕ್ಕೆ
[16]ಚಂದ್ರಸರಸ್ಸುಯೆಂದುನಾ
[17]ಮಧೇಯುವನುಪಾಲಿಶಿ . .
[18] . . ಯೆಂದುಪ್ರತಿಷ್ಠೆಯುಮಾಡಿ
[19]ದಕ್ಕೆಶಾಸನಂಶ್ರೀಜಯು
[20]ನೃಸಿಂಹ | ಶ್ರೀಶ್ರೀಶ್ರೀ

2

ಅದೇ ಕೋಟೆಯುಲ್ಲಿ ರಾಮುಸ್ವಾಮಿ ದೇವಾಲಯುದ ಮುಂಭಾಗದ ಪಡಸಾಲೆಯುಲ್ಲಿ
ನೆಟ್ಟಿರುವ ಕಲ್ಲು.

ಪ್ರಮಾಣ 6′ × 2′.

[1]ಶ್ರೀರಾಮಾಯಾರ್ಪಿತಾನ್‌ಭಕ್ತ್ಯೈರ್ಧರಾದ್ಯರ್ಥಾನ್‌ಹರೀ
[2]ತಿಯಃ | ತತ್ಪೂಜಕಶ್ಚತಸ್ಯಸ್ಯಾತ್ರಿಭಿರ್ವರ್ಷೈಃಕುಲ
[3]ಕ್ಷಯಃ | ಶ್ರೀರಾಮಶ್ಚಾತ್ರರಾಜಾಚ . . . . . .
[4]ಮಃ | ಮಹತ್ವಂಯದಿ . . . ಸತ್ಯಮೇವವಚೋಮಮ ||
[5]ಶ್ರೀಸ್ವಸ್ತಿಶ್ರೀವಿಜಯಾಬ್ಯುದಯುಶಾಲಿವಾಹನ
[6]ಶಕವರುಷಂಗಳು ೧೭೧೪ ವರುಷಕೆಸಲುವಪ್ರ

7 ಜೋಷ್ಟೆತ್ಯಬ್ದಮಾಘಶು ೧೫೪ ಶುಚಂದ್ರೋಪರಾಗ
8 ದಲಿಹೊಳೇನರಸಿಹ್ಮಪುರದವಳಕೋಟೆಯಲಿರು
9 ವಪಟ್ಟಾಭಿರಾಮಸ್ವಾಮಿಯವರಪಾದಪದ್ಮಂಗ
10 ಳಿಗೆಕಾಶ್ಯಪಗೋತ್ರದಆಪಸ್ತಂಬಸೂತ್ರಯಜುಶಾಖೆ
11 ಯಬೇಲೂರಕೃಷ್ಣಪ್ಪನಾಯಕರಪೌತ್ರರಾದವೆಂಕ
12 ಟಾದ್ರಿನಾಯಕರಪುತ್ರರಾದಕೃಷ್ಣಪ್ಪನಾಯಕ
13 ರುಕೊಟಭೂದಾನಶಾಸನಕ್ರಮವೆಂತೆಂದರೆಶ್ರೀಮ
14 ದ್ರಾಜಾಧಿರಾಜಶ್ರೀವೀರಕೃಷ್ಣದೇವರಾಯರೈಯನ
15 ವರುನಂಮವೃದ್ಧಪ್ರಪಿತಾಮಹರಾದಸಿಂಧು
16 ಗೋವಿಂದಹಿಮಕರಗಂಡಧವಳಾಂಕಭೀಮ
17 ಮಣಿನಾಗಪುರವರಾಧೀಶ್ವರಬಿರುದಸಪ್ತಾಂಗ
18 ಹರಣರಾದಯೆರಕೃಷ್ಣಪ್ಪನಾಯಕರಿಗೆಪಾಲಿಸ್ತ
19 ಬೇಲೂರುಸೀಮೆಗೆಸಲುವಅರಕಲಗೋಡಹೋಬಳಿ
20 ಯಾದಪಳಲುಗೋಡುಹೊಂದ್ರವಳ್ಳಿಯೆಂಬಯ
21 ರಡುಗ್ರಾಮಗಳಂನುಶ್ರೀಪಟ್ಟಾಭಿರಾಮಸ್ವಾ
22 ಮಿಯವರದಿವ್ಯಚರಣಾರವಿಂದಗಳಿ
23 ಗೆಸರ್ವಮಾನ್ಯವಾಗಿಸಹಿರಣ್ಯೋದಕ
24 ದಾನಧಾರಾಪೂರ್ವಕವಾಗಿಶ್ರೀರಾಮಾ
25 . . . . ಗಿಕೊಟ್ಟರು | .

(ಮುಂದೆ ಕಾಣುವದಿಲ್ಲ.)

3

ಹೊಳೇನರಸೀಪುರದ ಕೋಟೆ ನರಸಿಂಹಸ್ವಾಮಿ ದೇವಾಲಯದ ಮಹಾದ್ವಾರದ ಬಾಗಿಲುವಾಡದಲ್ಲಿ ಬರೆದಿರುವದು.

ಪ್ರಮಾಣ 2′ × 1′ 9″.

1 ಶುಭಮಸ್ತುಸ್ವಸ್ತಿಶ್ರೀವಿಜಯಾಭ್ಯುದಯಶಾಲಿವಾ
2 ಹನಶಕವರುಷ ೧೫೮೪ ಸಲುವಜಯ
3 ಸಂವತ್ಸರದಜೇಷ್ಠಬ ೧೦ ಲುಶ್ರೀಮತು
4 ಕ್ರಿಷ್ಣಪನಾಯಕರರಂಗಪ್ಪನಾಯ
5 ಕರನಾರಸಿಂಹನಾಯಕ . . . . .
6 ಧರ್ಮವಾಗಬೇಕೆಂದುಗುಡಿಕಟ್ಟಿಸಿಗ
7 ರುಡಪ್ರತಿಷ್ಠೆಮಾಡಿಸಿಗರುಡಸ್ವಾ
8 ಮಿಯ

(ಮುಂದೆ ಕಾಣುವದಿಲ್ಲ.)

4

ಅದೇ ದೇವಾಲಯದ ಪ್ರಾಕಾರದಲ್ಲಿ ದಕ್ಷಿಣಕಡೆ ರಾಮಾನುಜಾಚಾರ್ಯರ ಗುಡಿಯ ಬಳಿ ನೆಟ್ಟಿರುವ ಕಲ್ಲು.

ಪ್ರಮಾಣ 3′ 3″×1′ 4″.

1ಶುಭಮಸ್ತುಸ್ವಸ್ತಿಶ್ರೀವಿಜಯಾ
2ಭ್ಯುದಯಶಾಲಿವಾಹನಶಕವ
3ರುಷ ೧೫೧೦ ನೆಯಸರ್ವಧಾರಿಸಂ
4ವತ್ಸರದವೈಶಾಖಶುದ್ಧ ೧೫ ಲುಶ್ರೀ
5ಮತುಕೃಷ್ಣಪ್ಪನಾಯಕರವೆಂಕಟಾ
6ದ್ರಿನಾಯಕರಲಕ್ಷ್ಮಪ್ಪನಾಯಕರು
7ನರಸಿಹ್ಮದೇವರಸಂನಿಧಿಯಲಿ
8ತಂಮತಂದೆಚಿಕ್ಕನಾಯಕರಿಗೂ
9ತಂಮತಾಯಿಪದ್ಮಾಜಿಅಂಮನವರಿ
10ಗೂಪುಂಣ್ಯವಾಗಬೇಕೆಂದುಗುಡಿ
11ಯನ್ನುಕಟ್ಟಿಸಿರಾಮಾನುಜಾಚಾರ್ಯ್ಯರಪ್ರತಿ
12ಷ್ಠೆಯಮಾಡಿಸಿಅಮ್ರುತಪಡಿಗೆರಾಯರವರು
13ತಮಗೆಉಂಬಳಿಯಾಗಿಪಾಲಿಸಿದನರಸಿಂಹ್ಯ
14ಪುರದಸೀಮೆಯಹಾಡ್ಯಸ್ಥಳಕೆಸಲುವಜಾಕನ
15ಹಳ್ಳಿಯಗ್ರಾಮವನಯಿವೇದ್ಯಕೆಧಾರಾ
16ಪೂರ್ವಕವಾಗಿಸಮರ್ಪಿಸಿದರುಇದಕೆಶ್ಲೋಕ
17ಸ್ವದತ್ತಾದ್ವಿಗುಣಂಪುಣ್ಯಂಪರದತ್ತಾ
18ನುಪಾಲನಂ | ಪರದತ್ತಾಪಹಾರೇಣಸ್ವದತ್ತಂನಿಷ್ಫಲಂ
19ಭವೇತ್ || ದಾನಪಾಲನಯೋರ್ಮಧ್ಯೇದಾನಾಛ್ರೇಯೋನುಪಾ
20ಲನಂ | ದಾನಾತ್ಸ್ವರ್ಗಮವಾಪ್ನೋತಿಪಾಲನಾದಚ್ಯುತಂ
21ಪದಂ || ಶ್ರೀ ||

5

ಹೊಳೇನರಸೀಪುರಕ್ಕೆ ಪಶ್ಚಿಮ ಕೊಡಿಗೆ ಗದ್ದೆಗೆ ಆಗ್ನೇಯ ದಿಕ್ಕಿನಲ್ಲಿ ನೆಟ್ಟ ಕಲ್ಲು.

ಪ್ರಮಾಣ 2′ 3″×2′.

1ಆಳಿದಮಹಾಸ್ವಾಮಿಯ
2ವರುಗೊಲ್ಲರಸೆರ್ವೆಗಾರದು
3ಗ್ಗೆಯನಿಗೆಅಪ್ಪಣೆದಯ
4ಪಾಲಿಸ್ತಕೊಡಿಗೆಗದ್ದೆಶ್ರೀ

6

ಅದೇ ಗ್ರಾಮದಲ್ಲಿ ಕಟ್ಟೆಕೆರೆ ಶ್ರೀಕಂಠಯ್ಯನ ವಶದಲ್ಲಿದ್ದ ತಾಮ್ರ ಶಾಸನ.

೧ನೇ ಪತ್ರದ ಹಿಂಭಾಗ.

1 ಶುಭಮಸ್ತು । ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇತ್ರೈ
2 ಲೋಕ್ಯನಗರಾರಂಭಮೂಲಸ್ತಂಭಾಯಶಂಭವೇಹರೇರ್ಲೀಲಾವ
3 ರಾಹಸ್ಯದಂಷ್ಟ್ರಾದಂಡಃಸಪಾತುವಃಹೇಮಾದ್ರಿಕಲಶಾಯತ್ರಧಾ
4 ತ್ರೀಛತ್ರಶ್ರಿಯಂದಧೌ । ಕಾಶ್ಯಪಾನ್ವಯಜರಾಮದಾಸತೋಹ್ಯೇ
5 ಕಇಂದ್ರವಿಭವೋಜನಿಕ್ಷಿತೌ । ಶ್ರೀಗಿರೀಶಇತಿಭೂಮಿಪಸ್ತತಃ । ಪತ್ಯಭೂ
6 ದಥ. ತಿಮ್ಮಭೂಪತಿಃ । ತಸ್ಯಾತ್ಮಜೋಬೈಯ್ಯನೃಪಕ್ಷಿತೀಂದ್ರಃ । ಸತ್ಕೀ
7 ರ್ತಿಸಾಂದ್ರಃಶ್ರಿತವಾರ್ಧಿಚಂದ್ರಃ । ನಿಜಪ್ರತಾಪೋಷ್ಣಕರಪ್ರತಾಪತಿ
8 ರೋಹಿತಾರಾತಿಯಶಃಶಶಾಂಕಃ । ತಶ್ಯಾತ್ಮಜಃಕೃಷ್ಣಪಭೂಪವರ್ಯಃಪ್ರ
9 ತ್ಯರ್ಥಿಪೃಥ್ವೀಶತಮಿಶ್ರಸೂರ್ಯಃ । ನಿಶ್ಶೀಮವಿಖ್ಯಾತನಗೇಂದ್ರಧೈರ್ಯಃ ।
10 ಸದಾಕೃತಾಶೇಷಹಿತಾರ್ತಿಕಾರ್ಯಃ । ಸತೀವ್ರತಾನಾಂಪ್ರಥಮಾವಲಂಬಾ
11 ನಿಜೈರ್ಗುಣೈರ್ಲಬ್ಧಯಶಃಕದಂಬಾಮುಖಶ್ರಿಯಾನಿರ್ಜಿತಚ
12 ಂದ್ರಬಿಂಬಾತದ್ಧರ್ಮಪತ್ನೀವರಪದ್ಮಮಾಂಬಾಶ್ರೀಕೃಷ್ಣಭೂಪ
13 ಜಾತೇನಭೂಸುರಾರ್ಯಾಯಯಜ್ವಿನೇಪ್ರದತ್ತಸ್ಯಾಗ್ರಹಾರಸ್ಯ
14 ಲಿಖ್ಯತೇತಾಮ್ರಶಾಸನಂ । ಸ್ವಸ್ತಿಶ್ರೀವಿಜಯಾಭ್ಯುದಯಶಾಲಿವಾ
15 ಹನಶಕವರುಷಂಗಳು ೧೪೮೪ ಸಂದವರ್ತಮಾನವಾದರುಧಿರೋ
16 ದ್ಗಾರಿನಾಮಸಂವತ್ಸರದವೈಶಾಖಶುದ್ಧ ೧೫ ಲುಶ್ರೀಮತ್ಕಾ
17 ಶ್ಯಪಗೋತ್ರದಗಿರಿಯಪ್ಪನಾಯಕರಪ್ರಪೌತ್ರರಾದತಿಮ್ಮ
18 ಪ್ಪನಾಯಕರವರಪೌತ್ರರಾದಬೈಯಪ್ಪನಾಯಕರಪುತ್ರ
19 ರಾದಮಣಿನಾಗಪುರವರಾಧೀಶ್ವರಶಿಂಧುಗೋವಿಂದಧವ ।
20 ಳಾಂಕಭೀಮಹಿಮಕರಗಂಡಭೇರುಂಡಬಿರುದಸಪ್ತಾಂಗಹರಣ
21 ಸಂಗ್ರಾಮಧನಂಜಯಸಾಹಸವಿಕ್ರಮಾರ್ಕದಾನರಾಧೇಯೇತ್ಯಾ
22 ದಿಬಿರುದರಾಜಿವಿರಾಜಮಾನರಾದಅನವರತಸತ್ರಸಂತೋಷಿತ
23 ಸಕಲಸುರಭೂಸುರವೃಂದರಾದಸಕಲಧರ್ಮಪ್ರತಿಪಾಲಕರಾದ

೨ನೇ ಪತ್ರದ ಮುಂಭಾಗ.

24 ದೇವಬ್ರಾಹ್ಮಣಪರಿಪಾಲನಧುರಂಧರರಾದಕೃಷ್ಣಪ್ಪನಾಯಕರೈಯ್ಯ
25 ನವರುಕೌಂಡಿಣ್ಯಸಗೋತ್ರದಆಪಸ್ತಂಭಸೂತ್ರದಯಜುಃ
26 ಶಾಖಾಧ್ಯಾಯಿಗಳಾದಲಿಂಗಾದೀಕ್ಷಿತರಪ್ರಪೌತ್ರರಾದನಂಜುಂ
27 ಡದೀಕ್ಷಿತರಪೌತ್ರರಾದಕಪಿನಿದೀಕ್ಷಿತರಪುತ್ರರಾದನಂಜನಾಥ
28 ದೀಕ್ಷಿತರವರಿಗೆಕೊಟ್ಟಸರ್ವಮಾನ್ಯಾಗ್ರಹಾರದತಾಮ್ರಶಾಸನದ
29 ಕ್ರಮವೆಂತಂದರೆನಮಿಗೆರಾಯದತ್ತವಾಗಿಬಂದನರಸಿಂಹ
30 ಪುರಕೆವಳಿತವಾದಆಲಗೊಂಡನಹಳಿಎಂಬಗ್ರಾಮ ೧ ಕಟ್ಟೇ
31 ಕೆರೆಗ್ರಾಮ ೧ ಇವು ೨ ಗ್ರಾಮವನ್ನುಕಾಶ್ಯಪಗೋತ್ರದಗಿ
32 ರಿಯಪ್ಪನಾಯಕರವರಪ್ರಪೌತ್ರರಾದತಿಮ್ಮಪ್ಪನಾಯಕರವರಪೌ

33 ತ್ರರಾದಬೈಯಪ್ಪನಾಯಕರಪುತ್ರರಾದಕೃಷ್ಣಪ್ಪನಾಯಕರವರುತಂ
34 ಮಮಾತಾಪಿತೃಗಳಿಗೆಶಾಶ್ವತಸ್ವರ್ಗಲೋಕಾವಾಪ್ತಿಯಾಗಬೇಕೆಂದುನಂ
35 ಮಪುತ್ರಮಿತ್ರಕಳತ್ರಾದಿಗಳಿಗೂಶ್ರೇಯೋಭಿವೃದ್ಧಿಯಾಗಬೇಕೆಂ
36 ದುಈವೈಶಾಖಶುದ್ಧ ೧೫ ಪರ್ವಕಾಲದಲ್ಲಿಕಉಂಡಿಣ್ಯಾಸಗೋತ್ರ
37 ದಆಪಸ್ತಂಭಸೂತ್ರದಯಜುಶಾಖಾಧ್ಯಾಯಿಗಳಾದಲಿಂಗಾದೀಕ್ಷಿತರಪ್ರ
38 ಪೌತ್ರರಾದನಂಜುಂಡದೀಕ್ಷಿತರಪೌತ್ರರಾದಕಪಿನಿದೀಕ್ಷಿತರಪುತ್ರರಾದ
39 ನಂಜನಾಥದೀಕ್ಷಿತರವರಿಗೆಸಹಿರಂಣ್ಯೋದಕದಾನಧಾರಾಪೂರ್ವಕ
40 ವಾಗಿತ್ರಿಕರಣಶುದ್ಧಿಯಾಗಿಮೇಳಗನಹಳ್ಳಿಗೆಮೂಡಲಾದಹಂಣೆ
41 ಚಾಕನಹಳ್ಳಿಗೆಪಡುವಲಾದಪೆದನಹಳ್ಳಿಗೆತೆಂಕಲಾದಚಿಕಕಾಡ
42 ನೂರಿಗೆಬಡಗಲಾದಆಲುಗೊಂಡನಹಳಿಎಂಬಗ್ರಾಮ ೧ ಸುಂಣ
43 ಕಲುಹೊಸೂರಿಗೆಬಡಗಲಾದಗೊಂದಿಮಲೇನಹಳಿಗೆಮೂಡಲಾದಗು
44 ಳಿಸಾತೇನಹಳಿಗೆದಕ್ಷಿಣವಾದಇಪ್ಪಾಕೆಪಡುವಲಾದಕಟಿಕೆರೆಯ
45 ಎಂಬಗ್ರಾಮ ೧ ಇವು ೨ ಗ್ರಾಮವನ್ನುನಿಮಿಗೆದಾನ
46 ಧಾರಣಪೂರ್ವಕವಾಗಿಕೊಟೆವಾದಕಾರಣಆಗ್ರಾಮಗಳಿಗೆ
47 ಸಲುವಚತುಶ್ಸೀಮೆವಳಗೆಇರುವಗದೆಬೆದಲುತೋಟತುಡಿಕೆಅಣೆ

೨ನೇ ಪತ್ರದ ಹಿಂಭಾಗ.

48 ಅಚುಕಟುಕಾಡಾರಂಬನೀರಾರಂಬಗಳೆಂಬಅಷ್ಟಭೋಗಂಗಳನ್ನು
49 ನಿಧಿನಿಕ್ಷೇಪಜಲತರುಪಾಷಾಣಅಕ್ಷೀಣಆಗಾಮಿಸಿಧಸಾಧ್ಯಂಗಳೆ
50 ಂಬಅಷ್ಟತೇಜಸ್ವಾಮ್ಯಗಳನ್ನುಸಕಲಸುವರ್ಣಾದಾಯದವಸಾದಾ
51 ಯಹೊಗೆಕಾಣಿಕೆಮುಂತಾದಚಿಲುವಾನಕಾಣಿಕೆನೀವೆಅನುಭವಿಸಿ
52 ಕೊಂಡುಬರಲುಳ್ಳವರುಎಂದೂಕಾಶ್ಯಪಗೋತ್ರದಗಿರಿಯಪ್ಪನಾ
53 ಯಕರವರಪ್ರಪೌತ್ರರಾದತಿಮ್ಮಪ್ಪನಾಯಕರವರಪೌತ್ರರಾದಬೈಯ
54 ಪ್ಪನಾಯಕರವರಪುತ್ರರಾದಕೃಷ್ಣಪ್ಪನಾಯಕರ್ಯೆಯನವರೂಕಉಂ
55 ಡಿಣ್ಯಾಸಗೋತ್ರದಆಪಸ್ತಂಬಸೂತ್ರದಯಜುಶಾಖಾಧ್ಯಾಯಿಗಳಾ
56 ದಲಿಂಗಾದೀಕ್ಷಿತರಪ್ರಪೌತ್ರರಾದನಂಜುಂಡದೀಕ್ಷಿತರಪೌತ್ರರಾದಕಪಿ
57 ನಿದೀಕ್ಷಿತರಪುತ್ರರಾದನಂಜುನಾಥದೀಕ್ಷಿತರವರಿಗೆಕೊಟಸರ್ವಮಾನ್ಯಾ
58 ಗ್ರಹಾರದತಾಂಮ್ರಶ್ಯಾಸನಾ ‖ ಪೃಥಿವೀದೀಯಮಾನಾಯಯಾವಂ
59 ತೋಮಧ್ಯರೇಣವಃ । ತಾವದ್ವರ್ಷಸಹಸ್ರಾಣಿಬ್ರಂಹ್ಮಲೋಕೇಮಹೀಯತೇ ।
60 ದಾನಪಾಲನಯೋರ್ಮಧ್ಯೇದಾನಾತ್ಶ್ರೇಯೋನುಪಾಲನಂ । ದಾನಾತ್ಸ್ವರ್ಗಮವಾಪ್ನೋತಿ
61 ಪಾಲನಾದಚ್ಯುತಂಪದಂ । ಸ್ವದತ್ತಾಂಪರದತ್ತಾಂವಾಯೋಹರೇತವಸುಂಧ
62 ರಾಂ । ಷಷ್ಟಿವರ್ಷಸಹಸ್ರಾಣಿವಿಷ್ಟಾಯಾಂಜಾಯತೇಕ್ರಿಮಿಃ । ಸ್ವದತಾದ್ವಿಗು
63 ಣಂಪುಂಣ್ಯಂಪರದತ್ತಾನುಪಾಲನಂ । ಪರದತ್ತಾಪಹಾರೇಣ । ಸ್ವದತ್ತಂನಿಷ್ಫಲ
64 ಂಭವೇತು ನವಿಷಂವಿಷಮಿತ್ಯಾಹುಃಬ್ರಂಹ್ಮಸ್ವಂವಿಷಮುಚ್ಯತೇ । ವಿಷಮೇಕಾ
65 ಕಿನಂಹಂತಿಬ್ರಂಹ್ಮಸ್ವಂಪುತ್ರಪೌತ್ರಕಂ । ಅನ್ಯೇಷಾಂಭರ್ದಿತಂಭುಂಜ್ಯೇ
66 ಶ್ವಾಪಿಸ್ವಭರ್ದಿತಂನತುತತಃಕಷ್ಟತರೋನೀಚಃಸ್ವಯಂದತ್ತಾಪಹಾರಕಃ
67 ಸ್ವದತ್ತಾಪುತ್ರಿಕಾಧಾತ್ರೀಪಿತೃದತ್ತಾಸಹೋದರೀ । ಪರದತ್ತಾಸ್ವಯಂಮಾತಾದತ್ತಾಂ
68 ಭೂಮಿಂಪರಿತ್ಯಜೇತು । ಏಕೈವಭಗಿನೀಲೋಕೇಸರ್ವೇಷಾಮೇವಭೂಭುಜಾಂನ

69ಭೋಜ್ಯಾನಕರಗ್ರಾಹ್ಯಾವಿಪ್ರದತ್ತಾಪಸುಂಧರಾಆದಿತ್ಯಚಂದ್ರಾವನಿಲೋನಲ
70ಶ್ಚದ್ಯಾರ್ಭೂಮಿರಾಪೋಹೃದಯಯಂಯಮಶ್ಚಅಹಶ್ಚರಾತ್ರಿಶ್ಚಉಭೇ
71ಚಸಂಧ್ಯೇಧರ್ಮಶ್ಚಜಾನಾತಿನರಸ್ಯವೃತ್ತಂ || ಶ್ರೀಜಯನರಸಿಂಹ್ವ

7

ಹೊಳೇನರಸೀಪುರ ಹೋಬಳಿ ತವನಿಧಿ ಹರಿಹರಪುರದ ಅಗ್ರಹಾರದ ತಾಮ್ರ ಶಾಸನ.

ನಾಗರಾಕ್ಷರ— ೩ ಪತ್ರಗಳು — ವರಾಹ ಮುದ್ರೆ.

೧ನೇ ಪತ್ರದ ಹಿಂಭಾಗ.

1ಶ್ರೀಗಣಾಧಿಪತಯೇನಮಃಅವ್ಯಾದವ್ಯಾ
2ಹತಶ್ವರ | ಕಾರಣೋವಾರಣಾನನಃ | ವರದಃ
3ಸ್ತ್ರೀಪ್ರತಿಮರ | ಮಿಹಿರೋಹರನಂದನಃ | ಶ್ರೀಮೂ[ನಾ]ದಿವರಾಹೋ
4ಯಂ | ಶ್ರಿಯಂದಿಶತುಭೂಯಸೀಂ | ಗಾಢಮಾಲಿಂಗಿತಾಯೇನ | ಮೇ
5ದಿನೀಮೋದಕೇಸದಾ | ಅಸ್ತಿಕೌಸ್ತುಭಕಲ್ಪದ್ರು | ಕಾಮಧೇನು
6ಸಹೋದರಃ | ರಮಾನುಜಸ್ಸುಧಾನಾಥ | ಕ್ಷೀರಸಾಗರಸಂಭವಃ
7ಉದಭೂಧಸ್ವಯೇತಸ್ಯ | ಯದುರ್ನಾಮಮಹೀಪತಿಃ | ಪಾಲಿತಂಯ
8ತ್ಕುಲಿಯೇನ | ವಾಸುದೇವೇನಭೂತಳಂ | ಅಭೂತ್ತಸ್ಯಕುಲೇಶ್ರೀಮಾನ
9ಭಂಗುರಗುಣೋದಯಃ | ಅಪಾಸ್ತದುರಿತಾಸಂಗಸಂಗಮೋನಾ
10ಮಭೂಪತಿಃ | ಆಸನ್ನರಿಹರಃಕಂಪರಾಯೋಬುಕ್ಕಮಹೀಪ
11ತಿಃ | ಮಾರಪೋಮುದ್ದಪಶ್ಚೇತಿ | ಕುಮಾರಾಸ್ತಸ್ಯಭೂಪತೇಃ | ಪಂಚಾನಾ
12ನಾತ್ಮಗತೇಷಾಂ | ಪ್ರಖ್ಯಾತಃಭುಕ್ಕಭೂಪತಿಃ | ಪ್ರಚಂಡವಿಕ್ರಮೋಮಧ್ಯೇ | ಪಾಂಡವಾನಾಮಿವಾ ರ್ಜುನಃ | ದಿಕ್ಕರೀಂದ್ರದುರಾಧ
13ರ್ಷದಕ್ಷಿಣಾಸ್ಕಂಧಬಂಧುರಃ | ಬುಕ್ಕರಾಯಸ್ತತಶ್ರೀಮಾನಾ
14ಸೀದಾಹವಕರ್ಕಶಃ | ಯಸ್ಯೋಧೇನುಧರಂಗೇನಿಥಯ
15ವಿಭರಿತಾಸ್ತಾಂಡವಂಮಂಡಲಾಗ್ರೇವಕ್ತ್ರೇಶುಷ್ಕಾತುರುಷ್ಕಾ
16ರಿಪುಭಯಭರಿತಃಕೊಂಕಣಃಶಂಕಪಾರ್ಯಆಂದ್ರಾರಂಧ್ರಾತ್ರಾ
17ಣಿಧಾವಂತ್ಯಧತಿಮಧಿಪಥಂಗುರ್ಜರಾಜರ್ಘುರಾಂಗಾಃ | ಕಾಂ
18ಭೋಜಾಭಿಂನಧೈರ್ಯಾಸಪಾರಿಸಮಭವಂಪ್ರಾಪ್ತಭಂಗಾಃಕ
19ಳಿಂಗಾಃ | ರಾಜಾಧಿರಾಜಸ್ತೇಜಸ್ವೀಯೋರಾಜಪರಮೇಶ್ವರಃ |
20ಭಾಷಾತಿಲಂಘಿಭೂಪಾಲವಜಯಿಬಿರುದೋನ್ನತಃ | ರಾಜಾಧಿ
21ರಾಜಭುಜಗೋಪರರಾಜಭಯಂಕರಃ | ಹಿಂದುರಾಯಸುರ
22ತ್ರಾಣ . . . . ಪಶೋಭಿತಃ | ವಿಜಯಾಹ್ವನಗರೀವಿ
23ಶ್ವವಿಜಯೋದಯಶಾಲಿನೀ | ರಾಜ್ಞಾಯೇನತತಶ್ಚಾಕ್ರೀರಾ | ರಾಜ
24ಧಾನಿಕೃತಾಸ್ಪದಾ | ತಸ್ಯಗೌರಾಂಬಿಕಾನಾ[ಮಾ] | ಮಹಿಷೀ
25ಶ್ರೀಮತೀಮತಾ | . . ನಿನಿಯಪ್ರಣಾಜಾಯಾವಲ್ಲಭಸ್ಯಯ
26ಥಾರಮಾ | ಕಪರ್ದಿನೋಯಥಾಗೌ | ರೀಶಚೀವನೆಮುಚಿದ್ವಿಷಃ |
27ಪಿತಾಮಹಸ್ಯಸಾವಿತ್ರೀಛಾಯಾದಿನಮಣೇರಿವ | ವಿಭಾ
28ತಿರೂಪಲಾವಣ್ಯ | ತಿರಸ್ಕೃತತಿಲೋತ್ತಮಾ | ಅನಸೂಯಾಪಿ

೨ನೇ ಪತ್ರದ ಮುಂಭಾಗ.

29 ಸಾಸೂಯಾಪಾತಿವ್ರತ್ತ್ಯಸ್ಯಸಂಪದಾ ।
30 ಅಹೀನಭೋಗಸಂಪತ್ತಿ । ರಸೌರಾಜಶಿ
31 ಖಾಮಣಿಃ । ತಸ್ಯಹರಿಹರಂಗೌರ್ಯ್ಯಾಂ ಕುಮಾರಮುದಪಾದ
32 ಯನ್ । ಶಿಷ್ಟಾನ್‌ಸಂರಕ್ಷಿತಾಯಸ್ಯದುಷ್ಟಾನಾ । ಮಪಿನಿ
33 ಗ್ರಹಃಲಬ್ಧಾರ್ಥೈರ್ವಿದುಷಾಸಾರ್ಥಂಶ್ಲಾಘ್ಯೋಹರಿಹರಾತ್ಮನಃ ।
34 ಯಸ್ಮಿನ್‌ಷೋಡಶದಾನಾನಾಂ । ಯಶಸಾಪರಿಶೋಭಿತೇ । ದಾ
35 ನಾಂಬುಧಾರಯಾತಸ್ಯ । ವರ್ಧಂತೇಯಜ್ಞಪಾದಪಾಃಶಕಾ
36 ಬ್ದೇರುಷಿಚಂದ್ರಾಕ್ಷಿವಿಧುನಾಯುತವತ್ಸರೇ । ಯುವಾಖ್ಯೇಮಾ
37 ಘಮಾಸೇಚಶುಕ್ಲಪಕ್ಷೇಶುಭೇದಿನೇ । ಸಪ್ತಂಮ್ಯಾಂಚಪುಹಾಪುಂ
38 ಣ್ಯೇತುಂಗಭದ್ರಾನದೀತಟೇ । ಶ್ರೀವಿರೂಪಾಕ್ಷದೇವಸ್ಯ
39 ಸಂನಿಧೌಮುಕ್ತಿದಾಯಿನಿ । ಕುಂಚಿಕಾಹ್ವಯಮುಪೇಯು
40 ಷಿಸ್ಥಳೇ । ನಾರಶಿಂಹಪುರನಾಮಸೀಮಗೇಹೆಬ್ಬಹಳ್ಳಿ
41 ತಟನೀತಟಾಂತರಾತ್ಪಶ್ಚಿಮಾಂದಿಶಮುಪೇತ್ಯಭಾಸು
42 ರಾಂಬೆಟ್ಟಶೈಲಶಿಖರಾದ್ದಿಸಿಸ್ಥತಾಂಪೂರ್ವಭಾಗದಿ
43 ಪಿತಿರ್ಯಗಾಯ(ತಾ)ತಾಂ । ಗ್ರಾಮತೋಪಿಗವಿಸೋಮನ
44 ಹಳ್ಳೀನಾಮತೋದಿಶಿನಿಷಂಣಮಚಾಂಚಲಾಂಖ್ಯಾ
45 ತದೊಡ್ಡಬೆಟ್ಟಶ್ರುತಿತೋಸುಗತೋದಿಶಿನಿವಿಷ್ಟಮು
46 ದೀಚ್ಯಾಂಹೊಸಹಳ್ಳಿಶಿಗರಹಳ್ಳೀಬೈರಹಳ್ಳಿಪ್ರ
47 ತನಾಮಾಹ್ವಯೈಃಕಾಚನಹಳ್ಳೀಸಹಿತ್ಯೈಃಪರಿವೃತಮೇ
48 ತೈರುಪಗ್ರಾಮೈಃ । ಗ್ರಾಮಂಕಮಪಿಮನೋಹ[ರ]ತವನಿಧಿ
49 ನಾಮಾನಮುಲ್ಲಸತ್ಸಸ್ಯಂಹರಿಹರಪುರಾಭಿಧಾನಂ
50 ಪ್ರಾಪ್ಯಲಸಂತಂಪ್ರತೀತಮಪರಮಪಿಆತ್ರೇಯಗೋ
51 ತ್ರಾರ್ಣವಸೀತಧಾಮ್ನೇ । ಯಸ್ಮೈಯಜುಶ್ಶಾಖಿಕಯಾನ್ವಿ
52 ತಾಯ । ನುತಂಚಲೊಕೇಷುವರೇಂಣ್ಯಮಾಪಸ್ತಂಬಾಭಿಧಾ
53 ನಂಭಜತೇಚಿರಾಯ । ಕಲ್ಲಮಾಳಿಗೆಕೃತೋಪಪದ
54 ಶ್ರೀಕೇಶವಾವನಿಸುರೇಂದ್ರಸುತಾಯವಾಕ್ಯತರ್ಕ
55 ಪದಶಾಸ್ತ್ರಸಮರ್ಥಾಗ್ರೇಸರಾಯಗುಣಿನಾಂತಿಲಕಾಯ
56 ಶ್ರೋತ್ರಿಯಾಯಮುನಿಶೀಲಯುತಾಯ । ಶ್ರೀಪತೇಃಚರಣಚಿಂತ
57 ಭಾಜೇನತಮಾಧವಾಧ್ವರಿವರಾಯ । ಮನೀ

೨ನೇ ಪತ್ರದ ಹಿಂಭಾಗ.

58 ಷಾನಿರ್ಜಿತಾಮರ(ವ)ಗುರುಪ್ರತಿಭಾ[ಯ] । ಹರಿಹರನಾ
59 ಮಮಹೀಪೋರಥಸಪ್ತಮ್ಯಾಂರವೇಃಪ್ರಮೋದಕೃತೇಆಚಂದ್ರ
60 ತಾರಕಮಿಮಂಗ್ರಾಮಂಸಹಿರಂಣ್ಯವಾರಿಧಾರದಾಮ
61 ತ್ । ನಿಧಾನನಿಕ್ಷೇಪಜಲೋಪಲಾಕ್ಷೀಂಣ್ಯಾಗಾಮಿಶಿ
62 ದ್ಧೈರಪಿಸಾಧ್ಯಯುಕ್ತೈಃಸಮನಿತಸಂತತಮಷ್ಟ

63 ಭೋಗ್ಯೈ । ಸಸ್ಯೋತ್ತರಾರಾಮತಟಾಕಯುಕ್ತಂ । ಆಚಂದ್ರ
64 ಮಾತಾರಕಮಾಚಸೂರ್ಯಮದಾಂ । ಮುದಾಹರಿಹರ
65 ರಾಯಭೂಪಃ
66 ಅಸ್ಯಅಗ್ರಹಾರವರ್ಯಸ್ಯಚತುಶ್ಶೀಮಾವಿನಿರ್ಣಯಃ । ಸ

೩ ನೇ ಪತ್ರದ ಮುಂಭಾಗ.

67 ವೇರ್ಷಾಂಸುಖಭೋಧಾಯಲಿಖ್ಯತೇದೇಶಭಾಷಯಾಮೂಡಲಿ
68 ಗೆಹೆಬ್ಬಳ । ಆಸಮೀಪದಲ್ಲಿಆಲದಮರ । ಆಸಮೀಪ
69 ದಲ್ಲಿಶೀಮೇಕಲ್ಲು । ಅದಕ್ಕೆತೆಂಕಲಿಗೆಕಗ್ಗಲ್ಲೂ । ತೆಂಕಲಿ
70 ಗೆಬೆಟ್ಟಮೇರೆ । ಪಡುವಲಿಗೆಬೆಟ್ಟಮೇರೆಆಸಮೀಪದ
71 ಲ್ಲಿಆಲದಮರವೂ । ಆವತ್ತಿನಲ್ಲಿಶೀಮೇಕಲ್ಲೂ । ಅ
72 ಲಿಂದಾಬಡಗಲಾಗಿದೊಡ್ಡತೋಪು । ಅಲಿಂದಾಮುಂದೆಮಾ
73 ವುಅದರ । ಬಡಗಲಕಲ್ಲೂಅದೇಮೇರೆಯಾಗಿಬಡಗಲು
74 ಗವಿಸೋಮನಹಳಿಆನಡುವೆದೊಡ್ಡತೋಪು । ಆಸಮೀಪದ
75 ಲ್ಲಿಕಳಿಯಹೊದೆಯಸಮೀಪದಲ್ಲಿಹೊಲಮೇರೆಕಲ್ಲೂ । ಅ
76 ದಕ್ಕೆಯೀಶಾನ್ಯದಲ್ಲಿಹುಣಶೇಕಟ್ಟೇಮರ । ದಾನಪಾಲನಯೋ
77 ರ್ಮಧ್ಯೇ । ದಾನಾಛ್ರೇಯೋನುಪಾಲನಂ । ದಾನಾತ್ಸ್ವರ್ಗಮವಾಪ್ನೋ
78 ತಿ । ಪಾಲನಾದಚ್ಛ್ಯುತಂಪದಂ । ಯೇಕೈವಭಗಿನೀಲೋಕೇಸರ್ವೇ
79 ಷಾಮೇವಭೂಭುಜಾಂನಭೋಜ್ಯಾನಕರಗ್ರಾಹ್ಯಾವಿಪ್ರದತ್ತಾ
80 ವಸುಂಧರಾ । ಸಾಮಾನ್ಯೋಯಂಧರ್ಮಸೇತು । ನೃರ್ಪಾಣಾಂಕಾಲೇಕಾ
81 ಲೇಪಾಲನಿಯೋಭವದ್ಭಿಃಸರ್ವಾನೇತಾನ್ಭಾವಿನಃಪಾ
82 ರ್ಥಿವೇಂದ್ರಾನ್ಭೂಯೋಭೂಯೋಯಾಚತೇರಾಮಚಂದ್ರಃ ।
83 * ಶ್ರೀವಿರೂಪಾಕ್ಷಃ ॥

8

ಅದೇ ಹೋಬಳಿ ತೆವಡಹಳ್ಳಿ ಗ್ರಾಮದ ಮಧ್ಯದಲ್ಲಿರುವದು.

ಪ್ರಮಾಣ 3′ 3″ × 1′ 9″.

1 ಶ್ರೀಮತುಕೃಷ್ಣರಾಯರಭೂ
2 ಜಪ್ರತಾಪಮಲ್ಲರಸರೂನರಷೀ
3 ಪುರದಬೆಟ್ಟದತಿರುಮಲದೇ
4 ವರಿಗೆಥೆವಡಹಳ್ಳಿಯನೂದೇ
5 ವರಅಮೃಥಪಡಿಗೆಬಹುದಾ
6 ಂನ್ಯಸೌವಚ್ಛರದಷುದ್ಧಪಾಡ್ಯದ
7 ಲುಷಸನವಹಕಿಕೊಟ್ಟೆಊ
8 ಯಿದಹಲಿಪಿದರೆತಂಮ್ಮತಂದೆ
9 ತಾಯನೂತಂಮಶ್ರೀಗುರುವನೂ
10 ವಣರಾಸಿಯಲ್ಲಿಕೊಂದಪಪಕ್ಕೆಹೋಹ
11 ರೂ ॥

* ಕನ್ನಡಕ್ಷರದಲ್ಲಿ.

9

ಅದೇ ಹೋಬಳಿ ಗುಂಜೆ ಗ್ರಾಮದ ಊರಬಾಗಲಲ್ಲಿ ನಟ್ಟ ಕಲ್ಲು.

ನಾಗರಾಕ್ಷರ.

[1]ಸಾಧಾರಣ ಸಂವ
[2]ತ್ಸರದ ಜ್ಯೇಷ್ಠ ಶುದ್ಧ ದಶ

(ಮುಂದೆ ಕಾಣುವದಿಲ್ಲ.)

10

ಅದೇ ಹೋಬಳಿ ಲಕ್ಷ್ಮೀಪುರ ಗ್ರಾಮದ ಮಾರೀಗುಡಿಯ ಬಳಿ ನಟ್ಟ ಕಲ್ಲು.

ಪ್ರಮಾಣ 4′×2′ 6″.

[1]ಶ್ರೀಮತೇರಾಮಾನುಜಾಯನಮಃ
[2]ವಿಶ್ವಾವಸುಸಂವತ್ಸರದಜೇಷ್ಠ ಶುಧ ೧ ರಲೂಶ್ರೀಲ
[3]ಕ್ಷ್ಮೀಪುರದಲಿಂಮನವರಿಗೆಲಕ್ಷ್ಮಪ್ಪನಾ
[4]ಯಕರುಹೊಸ್ವಾಗಿಲಕ್ಷ್ಮೀಪುರವನುಕಟ್ಟಿಸಿನಂ
[5]ಮತಂದೆಚಿಕ್ಕನಾಯಕರಿಗೆನಂಮತಾಯಿಪ
[6]ದ್ಮಾಜಂಮಗೆಪುಣ್ಯವಾಗಲಿಯೆಂದುಕೊಟ್ಟೆಉ

11

ಅದೇ ಹೋಬಳಿ ಅಂಕನಹಳ್ಳಿ ಬಸವನ ಗುಡಿಯ ಪೂರ್ವ ಗೋಡೆಗೆ ನಟ್ಟ ಕಲ್ಲು.

ಪ್ರಮಾಣ 5′×3′.

[1]ಶ್ರೀರಸ್ತುನಮಸ್ತುಂಗಶಿರಶ್ಚುಂಬಿಚಂದ್ರ
[2]ಚಾಮರಚಾರವೇ | ತ್ರೈಲೋಕ್ಯನಗರಾರಂಭಮೂ
[3]ಲಸ್ತಂಭಾಯಶಂಭವೇ || ಹರೇರ್ಲೀಲಾವರಾಹಸ್ಯ
[4]ದಂಷ್ಟ್ರಾದಂಡಃಸಪಾತುವಃ | ಹೇಮಾದ್ರಿಕಲಶಾಯತ್ರ
[5]ಧಾತ್ರೀಛತ್ರಶ್ರಿಯಂದಧೌ || ಸ್ವಸ್ತಿಶ್ರೀವಿಜಯಾಭ್ಯು
[6]ದಯ . . . .

(ಮುಂದೆ ಕಾಣುವದಿಲ್ಲ.)

12

ಅದೇ ಹೋಬಳಿ ಆಲುಗೇನಹಳ್ಳಿ ಊರುಬಾಗಲ ಬಳಿ ನಟ್ಟ ಕಲ್ಲು.

ಪ್ರಮಾಣ 3′×2′

[1]ಶ್ರೀಮವಿಷುಸಂವತ್ಸ
[2]ರದ . . ೧೫ ಲುಮಲಿಗ
[3]ಉಡ . . ರದರಾಜ್ಯೆಯನವ
[4]ವರಸೇವೆಧರ್ಮ

13

ಕಾಡನೂರು ಹೋಬಳಿ ಜೋಡಿ ಮಲ್ಲೇನಹಳ್ಳಿ ಆಂಜನೇಯ ದೇವಸ್ಥಾನದ ಮುಂದೆ ನಟ್ಟ ಕಲ್ಲು.

ಪ್ರಮಾಣ 4′ × 2′.

. . . .
4 ಶಾಸನದಕ್ರಮವೆಂತೆಂದರೆನಂಮ . . . .
5 ಕೆಸಲುವಕಡೇಮಲ್ಲನಹಳ್ಳಿಯೆಂಬಗ್ರಾಮಕೆಪ್ರತಿನಾಮಧೇ
6 ಯವಾದಲಿಂಗಾಪುರವನು . . . .
7 ಗಳಿಗೆಧರ್ಮವಾಗಬೇಕೆಂದುಶ್ರೀವು . . . ಸಹಿರಣ್ಯೋದ
8 ಕದಾನಧಾರಾಪೂರ್ವಕವಾಗಿಕೊಟ್ಟೆವಾಗಿ . . . . . .
. . . .
11 . . . . ಕೃಷ್ಣಪ್ಪನಾ
12 ಯಕರ . . . ತ್ರರಾದವೆಂಕಟಾದ್ರಿನಾಯಕರಪೌತ್ರ
13 ರಾದಲಕ್ಷ್ಮಪ್ಪನಾಯಕರಪುತ್ರರಾದನಾರಸಿಂಹನಾಯ
14 ಕರವರುಪರಾಶರಗೋತ್ರದಆಪಸ್ತಂಬಸೂತ್ರದಯ
15 ಜುಃಶಾಖಾಧ್ಯಾಯಿಗಳಾದವಿರೂಪಾಕ್ಷಭಟ್ಟರಪ್ರಪೌತ್ರ
16 ರಾದದೇವರ್ಸೆಯಭಟ್ಟರಪೌತ್ರರಾದಪಂಪಂಭಟ್ಟರಪುತ್ರ
17 ರಾದ . . . ಭಟ್ಟರಿಗೆಕೊಟ್ಟಗ್ರಾಮದಶಿಲಾಶಾಸನ ।
18 . . . . ನಾಯೊಾಯಾಪಂ
19 ತಿ . . . . ತಾವದ್ವರ್ಷಸಹಸ್ರಾಣಿ
20 . . . .
21 . . . . ಶ್ರೀನೃಸಿಂಹಶ್ರೀ

14

ಗುಬ್ಬಿ ಹೋಬಳಿ ಗುಬ್ಬಿ ಗ್ರಾಮದಲ್ಲಿ ಗರ್ಗೇಶ್ವರ ದೇವಸ್ಥಾನದ ದಕ್ಷಿಣ ದಿಕ್ಕಿನಲ್ಲಿ ನಟ್ಟ ಕಲ್ಲು.

ಪ್ರಮಾಣ 3′ × 1′ 3″.

. . . .
3 ಲಪುರವರೇಶ್ವರನಂ
4 ದಗಿರಿನಾಥಶ್ರೀಮತು
5 ಪೆರ್ಮ್ಮನಡಿಗಳರಾಜ್ಯ
6 ಸ್ವಸ್ತಿಸ್ತುತ್ಯಾಭಿಮಾನಮಾ
7 ನಿತಪರಾಕ್ರಮವಿಕ್ರಾನ್ತಾನ
8 ನ್ತಗುಣಗಣವಿಭಾಸಿಭಾಸಿ
9 ರಪ್ರತಾಪೋಪ . . ತ್ತುಜ್ಜ
10 ಗಜ್ಜವೆಡಜ್ಜಶ್ರೀಮತ್‌ರಾ
11 ಜೆಯರಸರಅರಸಿ
12 ಗಳಾಬ್ಬೆರ್ದೇಗುಲಮು
13 ಮಾಡಿಸಿದಳ್ . . ಕ . .
14 . . . ಕಿಲಿಲೊಳಿರ್ಖ
15 ಣ್ಡುಗಣಿಕ್ಕೆ . . . . .
16 . . . .

15

ಅದೇ ಗ್ರಾಮದಲ್ಲಿ ಗರ್ಗೇಶ್ವರ ದೇವಸ್ಥಾನದ ಮುಂದೆ ನಟ್ಟ ವೀರಕಲ್ಲು.

ಪ್ರಮಾಣ

1 . . . ಗತಪಂಚಮಹಾಸಬ್ದ . . ಯಾರಪುರವರಾಧೀಸ್ವರಬುಜ . .
2 . . . .
3 . . . . ಉಡಂವಿಳಂಬಿಸಂವತ್ಸರದಜ್ಯೇಷ್ಠಮಾಸದದಸಮಿಾ
4 . . . . ತಂನ
5 . . . . ಪ್ರಜ . . . .
6 ಕೋಸುಗಗ್ಗ . . . ಗರಾಜನಮಗಗುಬಿಯುಯ . . . . .
7 . . . . ಸಲಿಸೆಪಟಿ . . . . ಕೊಂಗಳ . . . .

16

ಅದೇ ಗ್ರಾಮದಲ್ಲಿ ಮೊದಲ ಹಸಿಗೆ ಗದ್ದೆಯಲ್ಲಿ ನಟ್ಟ ಕಲ್ಲುಕಂಬದ ಮೇಲೆ.

ಪ್ರಮಾಣ 3′×1′.

೧ನೇ ಭಾಗ.

1 ಭದ್ರಮಸ್ತುಜಿನ
2 ಶಾಸನಸ್ಯಸ್ವಸ್ತಿಶ್ರೀಮನ್ಮಹಾಮಂ
3 ಡಲೇಶ್ವರನಘಟರಾದಿತ್ಯತ್ರಿ
4 ಭುವನಮಲ್ಲಚೋಳಕೊಂಗಾಳ್ವ
5 ದೇವರಪಾದಾರಾಧಕಬ್ರತು
6 ರಾವಸೆಬ್ಬಿಯುಮಮ್ಮಗನದ
7 ಟರಾದಿತ್ಯಸಾವನ್ತಬೂವೆಯು
8 ನಾಯಕನುತ್ತರಾಯಣಸಂಕ್ರ
9 ಮಣದಂದುಹಡುವಣತೂ
10 ಬಿನಮೊದಲೇರಿಯಲು ೧ ||
11 ಖಂಡುಗಬಯಲ_೨ ಖಂಡುಗಅ
12 ಡುವಿನಮಣ್ಣುಮಂಪದ್ಮಣ

೨ನೇ ಭಾಗ.

13 ನ್ದಿದೇವರಿಗೆಧಾರಾಪೂ
14 ರ್ವ್ವಕಂಮಾಡಿಬಿಟ್ಟುಕೊ .
15 ನುಈಧರ್ಮ್ಮಮನಳಿದವ
16 ಗೆಗಂಗೆಯತಡಿಯಲು
17 ಕವಿಲೆಯುಬ್ರಾಂಹ್ಮಣ
18 ರುಮಂಕೊಂದಬ್ರಹ್ಮತಿ
19 ಯಕ್ಕು ||

17

ಅದೇ ಹೋಬಳಿ ಉದ್ದೂರು ಗ್ರಾಮದಲ್ಲಿ ಈಶ್ವರ ದೇವಸ್ಥಾನದೊಳಗೆ ನಟ್ಟ ವೀರಕಲ್ಲು.

ಪ್ರಮಾಣ 4′ 6″×2′ 3″.

1 ನಮಸ್ತುಂಗಶಿರಶ್ಚುಂಬಿಚಂದ್ರಚಾಮುರಚಾರವೇ | ತ್ರೈಲೋಕ್ಯನಗರಾ
2 ರಂಭಮೂಲಸ್ತಂಭಾಯಶಂಭವೇ || ಚೋಳಃಕಾಳಗಳಃಪಾತು
3 ಯುಷ್ಮಾಂನಾಡಾಳುವಾ . . || ಕೊಂಗಾಖ್ಯದೇಶಾಲಂಕಾರವರೋದ್ದೂರು
4 ನಿವಾಸಿನಃ | ನಾಡಾಳುವಕುಲೇಮಾಯಿನಾಡಾಳುವಇತಿಶ್ರು |
5 ಶ್ರುತಃ | ಜಾತಃಕುಲಜಲಕ್ಷ್ಲೋಣೀರತ್ನಾಕರಇವಸ್ಥಿತಃ || ಆದ್ಯೋ
6 ನಾರಾಯಣಸ್ತಸ್ಯನಾರಾಯಣಇವಸ್ಥಿತಃ | ಚೋಳಿ

7ನಾಡಾಳುವಸ್ತಸ್ಯಪುತ್ರಃಶ್ರೀಶಂಕರೋಪಮಃ | ಪದ್ಮನಾಭಾಹ್ವಯಸ್ತಸ್ಯಪದ್ಮನಾ
8ಭೋಪಮಃಸುತಃ | ಮಾಯಿನಾಡಾಳುವಸ್ತಸ್ಯಪುತ್ರೋಸೌಲೋಕವಿಶ್ರು
9ತಃ | ತಾತಸ್ಯಾಸೌವೀರಸಿಲಾಪ್ರತಿಷ್ಠಾಂಕೃತವಾನ್ಪ್ರಭುಃ || ಶ್ರೀಮದ್ಯಾದವಾ
10ನ್ವಯಪ್ರತಾಪಕೀರ್ತ್ತಿರ್ಗತ್ತುಂಗಪತಾಕಿಗಳಹಶ್ರೀಮದ್ವಿಷ್ಣುವರ್ಧನಪ್ರ
11ತಾಪಚಕ್ರವರ್ತಿಹೊಯ್ಸಳಭುಜಬಳವೀರಶ್ರೀಬೊಣಗಭಾಗ್ಯನಿ
12ಧಿಗಳೊಳಗೆಜಗದೇಕಮಲ್ಲನಹ | ಅಭಿನವಬಲೀಂದ್ರನಹಸೋಮೇಶ್ವರ
13ಭೂಮೀಶ್ವರಪುತ್ರಶ್ರೀಣಿಸಿಂಹಾಸನಹ | ಅರಿರಾಯಗಜಕೇಸರಿಯಹ
14ವೈರಿಸೇನಾವನದಾವಾನಳನಹ | ಪರಹೃದಯಜಲಧಿವಡಬಾನಳನಹ | ಶತ್ರುಪ್ರತಾ
15ಪತಿಮಿರಕಾಂಡೋದ್ದಂಡನಹ | ವೀರಶ್ರೀನಾರಸಿಂಹಭೂಪತಿಯವೀರಪಟ್ಟಬದ್ಧಶುಭಾ
16ಭಿಷೇಕಮಹೋತ್ಸಾಹಸಿರಿಸ್ಥಿರವಾಗಲು | ಉತ್ಕೃಷ್ಟಧರ್ಮಪ್ರತಿಷ್ಠಿತಿವ
17ಹಚೋಳೇಶ್ವರದೇವನಿವಾಸವಹಹರಿಹರಸುಖನಿವಾಸವಹ
18ಗ್ರಹಾರವಾದಲುದ್ದೂರಶ್ರೀಮದಶೇಷಮಹಾಜನಂಗಳು . . .

(ಮುಂದೆ ಕಾಣುವದಿಲ್ಲ.)

18

ಅದೇ ಗ್ರಾಮದ ಊರುಬಾಗಲ ಮುಂದೆ ನಟ್ಟ ವೀರಕಲ್ಲು.

ಪ್ರಮಾಣ 4′ × 2′ 6″.

(ಮೇಲ್ಭಾಗ ಸವೆದು ಹೋಗಿದೆ.)

1 . . . . ನಾಯಕಬಾಗಿಹಳ್ಳಿಯಘಟ್ಟದ
2ತುರುಎತ್ತುಕೊಂಡುಕಳ್ಳರುಹೋಹಲ್ಲಿಕಳ್ಳರ .
3ಲಿ . . . . ಬಾಗಳ್ಳಿಬೀತನುವೀರಸಗಕೆಸಂದನುಮುಂಗ
4 . . . . ಮಾಡಿಸಿದರ್ . . ಮನಾಯ .

19

ಅದೇ ಹೋಬಳಿ ಜೋಡಿಕುಪ್ಪೇ ಗ್ರಾಮದ ಊರ ಮುಂದೆ ಬಿದ್ದಿರುವ ಕಲ್ಲು.

ಪ್ರಮಾಣ 2′ 6″ × 3′.

1ಶುಭಮಸ್ತುಸ್ವಸ್ತಿಶ್ರೀಭುವನಾಧೀಶ್ವರಸಮಸ್ತರಾಜಾಧಿರಾಜರಾಜಪರಮೇಶ್ವರಶ್ರೀಮನ್ಮಹಾಮೇ
2ದಿನೀಮೀಸರಗಂಡಕಟಾರಿಸಾಳುವಶ್ರೀಮದ್ದಕ್ಷಿಣಸಮುದ್ರಾಧಿಪತಿನಾರಸಿಂಹವರ್ಮಮಹಾರಾಜತನೂ
3ಭವಪ್ರಬಲಪ್ರತಾಪಸಕಲಭೂಮೀಶ್ವರನಿಕರಮಕುಟೀವಿನ್ಯಸ್ತಚರಣಾರವಿಂದಯುಗಲಸರ್ವಭುವನಪ್ರ ಚಾರ
4ಕುತೂಹಲಿತಕೀರ್ತ್ತಿಕುಲದೇವತಾಸಹಚರಚಾತುರ್ದ್ದಂತಬಲಾನ್ವಿದಿತವೀರಲಕ್ಷ್ಮೀಸಮಾಕರ್ಷಣಶ್ರೀ ಮತ್ಕೃಷ್ಣವರ್ಮ
5ಮಹಾರಾಯಂಸಮಸ್ತಪೃಥ್ವೀರಾಜ್ಯಂಗೆಯುತ್ತಿರಲೂತದ್ರಾಜನಾಸ್ಥಾನಶಿರೋಮಣಿಮಹಾಮಂತ್ರಿಹಿ ಸೂರಮಲ್ಲರ

6ಸಯ್ಯನವರುಹೊಯಿಸಳನಾಡನರಸಿಯಪುರದಸೀಮೆಯನಾಳುತ್ತಿರಲೂಶ್ರೀಮತ್ಶಾಲಿವಾಹನಶಕವ
ರ್ಷ ೧೪೩೮
7ಸಂದವರ್ತಮಾನಧಾತುಸಂವತ್ಸರದಪುಷ್ಯಶುದ್ಧ ೭ ಲುಮಂಗಳವಾರದಲುಘಳಿ ೨೬ ಮಹಾನಕ್ಷತ್ರಉ
ತ್ತ್ರರಾಹ
8ದಸಂದಘಳಿಗೆ ೨೪ || ನಿತ್ಯನಕ್ಷತ್ರರೇವತಿಘಳಿಗೆ ೪೭ || = ಶಿವಯೋಗ ೧೪ || = ವಣಿಜಾಕರಣಯಿಂ
ತೀಪಂಚಾಂಗಶಿದ್ಧಿ
9ಯಾದತಿಥಿಯಲೂಶ್ರಿಮದ್ದೋರುಂಗಲ್ಲಸೋಮೇಶ್ವರಾಚಾರ್ಯ್ಯಸಾಂಪ್ರದಾಯಸಂಶುದ್ಧರಾದವೋ
ಗೂರಸೋಮ
10ಯ್ಯದೇವೊಡೆಯರಕುಮಾರರುಮಲ್ಲಯ್ಯದೇವರಿಗೆದಾನಾರ್ತ್ಥವಾಗಿಶಿಲಾಸ್ಥಾಪನವಮಾಡಿದಕೆಱೆ
ಯಾರಪುರ
11ದಸ್ಥಳಕ್ಕೆಸಲುವಹಾಳ್ಪುರಗುಪ್ಪೆಯನೂಮಲ್ಲಯ್ಯದೇವರಪುರವೆಂದೂಹೆಸರನಿಟ್ಟುಕೊಟ್ಟೆವಾಗಿಆಗ್ರಾಮ
12ಸೀಮಾಂತರದವಿವರಮೂಡಣದಿಕ್ಕಿನಲ್ಲಿಸೋವನಹಳ್ಳಿಯಪಡುವಣನೊಸೆಯಹಳ್ಳದಮೂಡಣತಿಟ್ಟಿನ
13ಕಲ್ಲು ೧ ತೆಂಕಣದಿಕ್ಕಿನಲ್ಲಿಸೋವನಹಳ್ಳಿಯೆಲ್ಲೆಯಬಿದಿರಹಕ್ಕದಯಿಶಾನ್ಯದಕಲ್ಲು ೧ ನೈರುತ್ಯದಿಕ್ಕಿನ
ಲ್ಲಿಬಿ
14ದಿರಹಕ್ಕದಯಲ್ಲೆಯಬೆಂಡುಗನಹಳ್ಳಿಯಯಿಶಾನ್ಯದಕಲ್ಲು ೧ ಪಡುವಲುಗೊರಗೊಂಡಿಯತಳೆಯಹ
15ಳ್ಳದಕಲ್ಲು ೧ ವಾಯಾವ್ಯದಲ್ಲಿಗೊರಗೊಂಡಿಕೆಱೆಯಮೂಡಲುಕೋಡಿಯಕಲ್ಲು ೧ ಯಿಶಾನ್ಯದಲ್ಲಿ
ವೊಳಗೆಱೆ
16ಯನಿಡುವನಿಯಯೆಲ್ಲೆಯದಡದಕಲ್ಲು ೧ ಅಂತು ೭ ಲಿಂಗಮುದ್ರೆಯಕಲ್ಲಿನೊಳಗಾದಆಗ್ರಾಮದಸುಂಕ
17ಸುವರ್ಣ್ನಾದಾಯಗದ್ದೆಕೊಟ್ಟವಿಶೇಷಚರಾದಾಯಮೊದಲಾಗಿನಿಧಿನಿಕ್ಷೇಪಜಲಪಾಷಾಣಅಕ್ಷೀಣಿಆ
ಗ್ರಾಮಿಸಿ
18ದ್ಧಸಾಧ್ಯವೆಂಬಅಷ್ಟಭೋಗತೇಜಸ್ವಾಮ್ಯವನೂನಿಂಮಪುತ್ರಜ್ಞಾತಿಸಾವಂತದಾಯದನೂಮತುಪ್ಪರ
ವಾಸಿ
19ಸಮಸ್ತಬಳಿಸಹವಾಗಿಆಚಂದ್ರಾರ್ಕ್ಕಸ್ಥಾಯಾಗಿಅನುಭವಿಸಿಬಹಿರಿಯೆಂದುಮಾಡಿದದರ್ಮ್ಮಶಾಸನಂ |
20ಸ್ವದತ್ತಂದ್ವಿಗುಣಂಪುಣ್ಯಂಪರದತ್ತಾನುಪಾಲನಂಪರದತ್ತಾಪಹಾರೇಣಸ್ವದತ್ತಂನಿಷ್ಫಲಂಭವೇತ್ || ಸ್ವದ
21ತ್ತಂಪರದತ್ತಾಂವಾಯೋಹರೇತಿವಸುಂದರಾಂಷಷ್ಟಿರ್ವರುಷಹಸ್ರಾಣಿವಿಷ್ಟಾಯಾಜಾಯತೇಕ್ರಿಮಿಃ ||
22ಯಿದಕ್ಕೆತಪ್ಪಿದವರುವಾರಣಾಶಿಯತಡಿಯಲ್ಲಿತಂಮಶ್ರೀಗುರುವವದಿಸಿದಪಾತಕಕ್ಕೆಹೋಹರು

ARKALGUD TALUQ.

ಅರಕಲಗೂಡು ತಾಲೂಕು.

1

ಅರಕಲಗೂಡಿನ ಕೋಟೆಯಲ್ಲಿ ನರಸಿಂಹದೇವಸ್ಥಾನಕ್ಕೆ ಪಶ್ಚಿಮ ಗರುಡಕಂಭದ ಬಳಿ ನೆಟ್ಟ ಕಲ್ಲು.

ಪ್ರಮಾಣ $1' \ 9'' \times 1' \ 6''$.

[1] ಸ್ವಸ್ತಿಶ್ರೀಮತುಪ್ರಮಾದೀ
[2] ಚಸಂವತ್ಸರದವಯಿಶಾಖಬ ೧ ಲು
[3] ಸಿದಪಗಉಡರುಬಸವಾಪಟ್ಟ
[4] ಣದಸ್ತಳದಪಂಚಾಳರಿಗೆಕೊಟಶಾ
[5] ಸನದಕ್ರಮವೆಂತೆಂದರೆಬಸವಾಪಟಣದಸ್ತ
[6] ಳದಸುಂಕವಿಪ್ಪಡಿಬಂದುಕೊಟಶಾಸ
[7] ನಯಿದಕ್ಕೆಆರೊಬ್ಬನುಅಳು
[8] ಪಿದರೆತಂನ . . . ತಾ . .
[9] ಗೆತಿಂದವರು

2

ಅರಕಲಗೂಡಿನಲ್ಲಿರುವ ಶಾಸನದ ನಕಲು*.

ಶ್ರೀಮದ್ರಾಜಾಧಿರಾಜಪರಮೇಶ್ವರಪ್ರೌಢಪ್ರತಾಪನಪ್ರತಿಮಲ್ಲಶ್ರೀಮ
ತುಚಿಕದೇವಮಹಾರಾಜವಡೆಯರ್ಯೆಯ್ಯನವರು
ಪ್ಹಿಂಗಳನಾಮಸಂವತ್ಸರದವೈಶಾಖಬ ೨ ಯಲ್ಲುಅರಕಲಗೂಡುಹಂ
ಪೈಯ್ಯಗೆಬರಶಿಕಳುಹಿಶಿದನಿರೂಪಾಅದಾಗಿಅರಕಲಗೂಡುಅಷ್ಟ
ವಣೆಸ್ತಳದಶ್ಯಾನಭಾಗತನವುಪೂರ್ವಾರಭ್ಯರಾಯದತ್ತವಾಗಿವಂ
ಶಪಾರಂಪರ್ಯವಾಗಿಭೈರೆಹೆಬಾರುವನವೆಂಕಟಪತಿಗೆನಡದುಬರುತ್ತಾಯಿ
ದ್ದಲ್ಲಿಯಿವರಿಗೆಸೇರಲಾರದಯಿವರಹಸ್ತಕನರಸಪ್ಪನಮಗನಂಜಪ್ಪನೆಂ
ಬವಾಅರಿಕೆಮಾಡಿಕೊಂಡವಿವರಯಿವರುಅರಕಲಗೂಡುಅಷ್ಟವಣೆ
ಸ್ತಳದಶ್ಯಾನಭಾಗರುಅಲ್ಲಾಇವರುರಾಜದ್ರೋಹಿತನಾಮಾಡಿಹೋದವ
ರುಯುಂಬುವದಾಗಿಅರಿಕೇಮಾಡಿಕೊಳ್ಳಲಾಗಿಯಿಾವೆಂಕಟಪತಯ್ಯ
ನೆಟ್ಟಗೆನಿಂತುಅಪ್ಪಣೇಪ್ರಕಾರಸುತ್ತಲ್‌ಅರ್ಕೇಶ್ವರಸ್ವಾಮಿಯವರಪಾದದ
ಮುಂದೆರಾಯದತ್ತವಾಗಿನಮ್ಮವಂಶಪಾರಂಪರ್ಯವಾಗಿನಮಗೆಅರಕಲಗೂಡು
ಅಷ್ಟವಣೆಸ್ತಳದಶ್ಯಾನಭಾಗತನವುನಡದುಬರುತ್ತಾಯಿದದುವುಂಟು

---

* ಸ್ಥಳದವರಿಂದ ಬಂದದ್ದು.

ನಮ್ಮಲ್ಲಿ ರಾಜದ್ರೋಹಿತನವುಯಿಲ್ಲಾ ಯೆಂಬುವದಾಗಿಅಪ್ಪಣೆಪ್ರ
ಕಾರಸುತ್ತಲ್ಅಕ್ಕೇರ್ಶ್ವರಸ್ವಾಮಿಯವರಪಾದದಮುಂದೆಅತಿಕ
ಠಿಣವಾಗಿಯಿರುವಕಾದುತುಪ್ಪದಲ್ಲಿ ಕೈಯನಿಕ್ಕಿಗೆದ್ದನಾದಕಾರಣ
ಪೂರ್ವಪ್ರಕಾರಕೆಅರಕಲಗೂಡುಅಷ್ಟವಣೆಸ್ತಳದಶ್ಯಾನಭಾಗತನವ
ನ್ನುಯಿಾಶ್ಯಾನಭಾಗತನಕ್ಕೆಪೂರ್ವದಲ್ಲಿನಡಯುತ್ತಾಯಿದ್ದ
ಸ್ವಾಸ್ತ್ಯಗಳಲ್ಲಿ ಯಿೂದಿವಸನೇಮಕಾಮಾಡಿಯಿರುವದುಅರಕಲಗೂ
ಡಿಗೆರಾಯಸಮುಟ್ಟಿದಕ್ಕೆನಮ್ಮಲ್ಲಿ ಹೇಮಾವತೀತೀರದಲ್ಲಿ ಯಿರುವ
ಶ್ಯಾನಭಾಗರಹಳ್ಳಿಗ್ರಾಮಬಂದಕ್ಕೆ ೫೫೮ ೦ ಅರಕಲಗೂಡುಕಸಬಗ್ರಾಮ
ದಲ್ಲುಬಿಡಿಸ್ವಾಸ್ತ್ಯ ೭ || ೧ ವೀರಭದ್ರನಗುಡಿಹಿಂದಣಮನೆಸಹಾ
ಯಿೂದಿವಸದಲ್ಲುಬೈರೇಹೆಬ್ಬಾರ್ರುವನವೆಂಕಟಪತಿಗೆಧಾರೆನೆರೆದುಕೊಟ್ಟು
ಯಿಧೇವಾದಕಾರಣಇವನಿಗೆಅರಮನೆಯಿಂದಾಕಡಿತಭಳಾವನ್ನು
ಕೊಡಿಸಿಇವನಕೈಯಿಂದಮುಂದಕ್ಕೆಅರಕಲಗೂಡುಅಷ್ಟವಣೇ
ಸ್ತಳದಶ್ಯಾನಭಾಗತನದಸಕಲಲೆಖ್ಖಗಳನ್ನುಬರಸಿಕೊಂಡು
ಬರುವದುಯಿೂನಿರೂಪದನಕಲನ್ನುಅರಮನೆಶ್ಯಾನಭಾ
ಗನಲೆಖ್ಖಕ್ಕೆಬರಸಿಕೊಟ್ಟುಯಿೂನಿರೂಪವನ್ನುಯಿೂವೆಂಕಟ
ಪತಿವಶಕ್ಕೆಕೊಡುವದು

3

ಅರಕಲಗೂಡಿನಲ್ಲಿರುವ ಮತ್ತೊಂದು ಶಾಸನದ ನಕಲು*.

ಶ್ರೀಮದ್ರಾಜಾಧಿರಾಜರಾಜಪರಮೇಶ್ವರಪ್ರವುಢಪ್ರತಾಪನಪ್ರತಿಮಶ್ರೀ
ವೀರಚಿಕದೇವಮಹಾರಾಜವಡಯರ್ಯೈಯ್ಯನವರು || ಪ್ಯಂಗಳನಾಮ
ಸಂವತ್ಸರದವೈಶಾಖಬ ೨ ಲ್ಲುಶ್ರೀರಂಗಪಟ್ಣದರತ್ನಶಿಂಹ್ವಾಸನಾರೂಢರಾ
ಗಿಪ್ರಿಥುವೀಸಾಂಬ್ರಾಜ್ಯಂಗೈಯುತ್ತಾಯಿರಲುಅರಕಲಗೂಡುಭೈರುವಹೆ
ಬಾರುವನವೆಂಕಟಪತಿಗೆಬರ್ಸಿಕೊಟದಾನಶಾಸನಾಅದಾಗಿ
ಅರಕಲಗೂಡಅಠವಣೆಸ್ತಳದನಾಡಿಗರವರಶ್ಯಾನುಭಾಗತ
ನವುಪೂರ್ವಾರಭ್ಯನಿಂನ್ನವಂಶಪಾರಂಪರ್ಯವಾಗಿಯೂನಿಮಗೆನಡದುಬ
ರುತ್ತಾಯಿದ್ದಲ್ಲಿನಿಂನ್ನಯಜಮಾನತಂನಹಸ್ತಕನಮೇಲೆಆಬದುಕು
ಆರೋಪಿಶಿಸ್ತಳಬಿಟ್ಟುಹೋಗಿಅಲ್ಲಿ ಯೇಸ್ವರ್ಗಸ್ತನಾದಕಾರಣ
ನೀನುಯಿಲ್ಲಿಗೆಬಂದುನಾನುಅರಕಲಗೂಡುಸ್ತಳದಅಠವಣೆಸ್ತಳ
ದಶ್ಯಾನಭಾಗಯಂದುಅರಿಕೆಮಾಡಿಕೊಳಲಾಗಿನಿನಿಗೆಶೇರಲಾರದ
ನಿನ್ನಹಸ್ತಕುನಂಜಪ್ಪಯಂಬವಯಿಲ್ಲಿಗೆಬಂದುಅರಿಕೆಮಾಡಿಕೊಂಡವಿವರ
ಯಿೂವೆಂಕಟಪತಿಅರಕಲಗೂಡುಸ್ತಳದಶ್ಯಾನಭಾಗನಮಗನೂಅಲ್ಲ
ಯಿವರಯಜಮಾನರಾಜದ್ರೋಹತನವಮಾಡಿಹೋದಾಯಿಂಬುವದಾಗಿ
ಅರಿಕೆಮಾಡಿಕೊಳಲಾಗಿನೀನುಯಿಾಮಾತಿಗೆನೆಟ್ಟಗೆನಿಂತ್ತುಅರಕಲ
ಗೂಡುಅಠವಣೆಸ್ತಳದಶ್ಯಾನಭಾಗತನವುರ್ರಾಯದತ್ತವಾಗಿನಂ
ನ್ನವಂಶಪಾರಂಪರ್ಯವಾಗಿನಮಗೆನಡದುಬರುತ್ತಾಯಿದ್ದದ್ದುವುಂಟುನಂಮ್ಮಲ್ಲಿ

* ಸ್ಥಳದವರಿಂದ ಬಂದದ್ದು.

ರಾಜದ್ರೋಹತನವೂಯಿಲ್ಲಾಯೆಂಬದಾಗಿಅಪ್ಪಣೆಪ್ರಕಾರಕ್ಕೆಸುತ್ತಲ್
ಅರಕೇಶ್ವರಸ್ವಾಮಿಯವರಪಾದದಸಂನಿಧಾನದಲ್ಲಿಅತಿಕಠಿಣ
ತರವಾಗಿಕಾದುಯಿದ್ದತುಪ್ಪದಲ್ಲಿಕೈಯ್ಯನಿಕ್ಕಿಗೆದ್ದೆಯಾದಕಾರ
ಣಪೂರ್ವಪ್ರಕಾರಕ್ಕೆಯೀದಿವ್ಸದಲ್ಲುಯೀಅರಕಲಗೂಡಅಠ
ವಣೆಸ್ತಳದಶ್ಯಾನುಭಾಗತನವಂನ್ನುಯೀಶ್ಯಾನುಭಾಗತನಕ್ಕೆಪೂರ್ವದಲ್ಲಿ
ನಡೆಯುತ್ತಾಯಿದ್ದಸ್ವಾಸ್ಥ್ಯಗಳಲ್ಲಿಯೀದಿವ್ಸನೇಮಕಾಮಾಡಿದ್ದುಅರಕಲ
ಗೂಡಿಗೆವಾಯವ್ಯಮೂಲೆಯಲ್ಲಿವಿದಿಕ್ಕಿನಲ್ಲಿಹೇಮಾವತೀನದೀತೀರದಲ್ಲಿ
ಯಿರುವಶ್ಯಾನಭಾಗನಹಳಿಗ್ರಾಮಕ್ಕೆ ೫೫೮೦ ವರಹಅರಕಲಗೂಡುಕ್ಸಬಾ
ಗ್ರಾಮದಲ್ಲುಬಿಡಿಸ್ವಾಸ್ಥ್ಯ ೭ || ೧ ವೀರಭದ್ರದೇವರಗುಡಿಹಿಂದ್ದಣಮನೆ
ಸಹಾಯೀದಿವ್ಸದಲ್ಲುನಿನಿಗೆಧಾರಾಗ್ರಹೀತವಾಗಿಕೊಟ್ಟುಯಿರು
ವದ್ದರಿಂದಾಅಪ್ಪಣೆಪ್ರಕಾರಕ್ಕೆಅರಕಲಗೂಡಅಠವಣೆಸ್ತಳದಶ್ಯಾ
ನಭಾಗತನದಸಕಲಲೆಖ್ಖವಂನುಬರದುಕ್ಕೊಂಡುಯೀಸ್ವಾಸ್ಥ್ಯಗಳಂನು
ಅನುಭವಿಶಿಕ್ಕೊಂಡುನಿಂನ್ನಪುತ್ರಪೌತ್ರಪಾರಂಪರ್ಯವಾಗಿಯೂ
ಸುಖದಲ್ಲಿಯಿರುವದುಯಂಬದಾಗಿಬರ್ಶಿಕೊಟ್ಟದಾನಶಾಸನಾ

4

ಅರಕಲಗೂಡು ಹೋಬಳಿ ಜೋಡಿಮುತ್ತಿಗೆ ಗ್ರಾಮದ ಕಾರ್ಯಕರ್ತ ರಾಮಯ್ಯನ ವಶದಲ್ಲಿದ್ದ ತಾಮ್ರಶಾಸನ.

ಮುಂಭಾಗ.

1 ಶುಭಮಸ್ತು । ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇತ್ರೈಲೋಕ್ಯನಗ
2 ರಾರಂಭಮೂಲಸ್ತಂಭಾಯಶಂಭವೇ । ಹರೇರ್ಲೀಲಾವರಾಹಸ್ಯದಂಷ್ಟ್ರಾದಂಡ
3 ಸ್ಸಪಾತುನಃಉಧೃತಾಮೇದಿನೀಯೇನಕಳಂಕಮಿವಯತ್ರಸಾಸ್ವಸ್ತಿಶ್ರೀವಿಜಯಾಭ್ಯು
4 ದಯಶಾಲಿವಾಹನಶಕವರ್ಷಂಗ್ಗಳು । ೧೬೦೮ ನೆಯರಕ್ಷಾಕ್ಷಿಸಂವತ್ಸರದಮಾರ್ಗಶಿ
5 ರಶುಧ ೧೫ ಲ್ಲೂಕಾಸ್ಯಪಗೋತ್ರದಆಪಸ್ತಂಭಸೂತ್ರದಬೇಲೂರಕೃಷ್ಣಪ್ಪನಾಯಕರಪ
6 ಉತ್ರರಾದವೆಂಕಟಾದ್ರಿನಾಯಕರಪುತ್ರರಾದಕೃಷ್ಣಪ್ಪನಾಯಕರೂಮುತ್ತಿಗೆಗ್ರಾಮ
7 ಕ್ಕೆಪ್ರತಿನಾಮವಾದಕೃಷ್ಣಾಪುರದಅಶೇಷವಿದ್ವಂನ್ಮಾಹಾಜನಂಗ್ಗಳಿಗೆಬರಸಿಕೊ
8 ಟ್ಟಅಗ್ರಹಾರದಾನಶಾಸನಕ್ರಮವೆಂತೆಂದರೆಪೂರ್ವದಲ್ಲಿಶ್ರೀಮದ್ರಾಜಾಧಿರಾಜ
9 ರಾಜಪರಮೇಶ್ವರಶ್ರೀವೀರಪ್ರತಾಪಶ್ರೀವೀರಕೃಷ್ಣರಾಯದೇವಮಹಾರಾಯರೈಯನವರೂ
10 ನಂಮ್ಮಪ್ರುದ್ಧಪ್ರಪಿತಾಮಹರಾದಸಿಂಧುಗೋವಿಂದಹಿಮಕರಗಂಡಧವಳಾಂಕ್ಕಭೀಮಮಣಿ
11 ನಾಗಪುರವರಾಧೀಶ್ವರವೈರಿಯೆದ್ಧಸಪ್ತಾಂಗ್ಗಹರಣರಾದಂಥಾಯರಕೃಷ್ಣಪ್ಪನಾಯಕ
12 ರೈಯನವರಿಗೆಪಾಲಿಸ್ತಸೀಮೆಯೊಳಗಣಕೊಂಗನಾಡವಳಿತದಮಳಲಕೆರೆಗೆಪೂರ್ವ ।
13 ದಾರಸನಹಳ್ಳಿಗೆಪಶ್ಚಿಮಹೊಂನ್ನವಳಿಗೆದಕ್ಷಿಣವೊರಲಿಗೆಉತ್ತರವಾದಂಥಾಮುತ್ತಿಗೆಗ್ರಾ
14 ಮವನೂ ೧೨ ||| ವೃತ್ತಿಮಾಡಿಯಿದರಲ್ಲಿವಿಶ್ವಾಮಿತ್ರಗೋತ್ರದಬೋಧಾಯನಸೂತ್ರದಯಜು
15 ಶಾಖಾಧ್ಯಯನರಾದದುಗ್ಗಾದೀಕ್ಷಿತರಪೌತ್ರರಾದತ್ರಿಯಂಬಕಭಟ್ಟರಪುತ್ರರಾದವಿರು
16 ಪಾಕ್ಷಭಟ್ಟರಿಗೆವೃತ್ತಿ ೧ ||| ಭಾರದ್ವಾಜಗೋತ್ರದಆಪಸ್ತಂಭಸೂತ್ರದಯಜುಶಾಖಾಧ್ಯ
17 ಯನರಾದಸೂರ್ಯನಾರಾಯಣಭಟ್ಟರಪುತ್ರರಾದಕೃಷ್ಣದೀಕ್ಷಿತರಪುತ್ರರಾದಯ

18 ಗ್ಣ್ಯರಾಮದೀಕ್ಷಿತರ್ರಿಗೆಉ್ರತ್ತಿ ೧ ವಂದುಕಾಸ್ಯಪಗೋತ್ರದಆಪಸ್ತಂಭಸೂತ್ರದಯಜುಶಾಖಾ
19 ಧ್ಯಯನರಾದನರಸಾಭಟ್ಟರಪಉತ್ರರಾದನರಸಿಂಭಟ್ಟರಪುತ್ರರಾದಲಿಕ್ಷಂತಲನರಸಾ
20 ವಧಾನಿಗಳಿಗೆಉ್ರತ್ತಿ ೧ ವಂದುಭಾರದ್ವಾಜಗೋತ್ರದಆಶ್ಲಾಯನಸೂತ್ರದರುಕ್ಶಾಖಾಧ್ಯ
21 ಯನರಾದರಾಮಾಭಟ್ಟರಪಉತ್ರರಾದನರಹರಿಭಟ್ಟರಪುತ್ರರಾದಮಹದೇವಭ
22 ಟ್ಟರಿಗೆಉ್ರತ್ತಿ ೧ ವಂದುಆತ್ರೇಯಗೋತ್ರದಆಪಸ್ತಂಭಸೂತ್ರದಯಜುಶಾಖಾ
23 ಧ್ಯಯನರಾದಈಶ್ವರಭಟ್ಟರಪಉತ್ರರಾದಧರ್ಮರಾಜಭಟ್ಟರಪುತ್ರರಾದವೆಂ
24 ಕಟೇಶಭಟ್ಟರಿಗೆಉ್ರತ್ತಿ ೧ ವಂದುಆತ್ರೇಯಗೋತ್ರದಆಪಸ್ತಂಭಸೂತ್ರದಯ
25 ಜುಶಾಖಾಧ್ಯಯನರಾದಧರ್ಮರಾಜಭಟ್ಟರಪಉತ್ರರಾದಮಹದೇವಭಟ್ಟರಪು
26 ತ್ರರಾದಬ್ರಂಹ್ಮೇಶ್ವರಭಟ್ಟರಿಗೆಉ್ರತ್ತಿ ೧ ವಂದುಕುಂಡಿನಗೋತ್ರದಆಪಸ್ತಂಭಸೂ
27 ತ್ರದಯಜುಶಾಖಾಧ್ಯಯನರಾದಮಹಾಗಣಪತಿಭಟ್ಟರಪಉತ್ರರಾದವೆಂಕ್ಕ
28 ಟೇಶ್ವರದೀಕ್ಷಿತರಪುತ್ರರಾದಚಿತಂಬರಭಟ್ಟರ್ರಿಗೆಉ್ರತ್ತಿ ೧ ವಂದುಭಾರದ್ವಾಜ
29 ಗೋತ್ರದಆಪಸ್ತಂಭಸೂತ್ರದಯಜುಶಾಖಾಧ್ಯಯನರಾದಲಿಉಭಳಭಟ್ಟ
30 ರಪಉತ್ರರಾದಹೇಮಾದ್ರಿಭಟ್ಟರಪುತ್ರರಾದರಾಮಾವಧಾನಿಗಳಿಗೆಉ್ರತ್ತಿ
31 ೧ ವಂದುಗಉತಮಗೋತ್ರದಆಪಸ್ತಂಭಸೂತ್ರದಯಜುಶಾಖಾಧ್ಯ

ಹಿಂಭಾಗ.

32 ಯನರಾದಕ್ರುಷ್ಣಭಟ್ಟರಪಉತ್ರರಾದವೆಂಕಟರಾಮಭಟ್ಟರಪುತ್ರರಾದತಿಂಮಾ
33 ವಧಾನಿಗಳಿಗೆಉ್ರತ್ತಿ ೧ ವಂದುಹರ್ರಿತಸಗೋತ್ರದಆಶ್ಲಾಯನಸೂತ್ರದರುಕ್ಶಾಖಾ
34 ಧ್ಯಯನರಾದವಿಠಲಭಟ್ಟರಪಉತ್ರರಾದವೆಂಕಟಭಟ್ಟರಪುತ್ರರಾದನಾರಾಯಣ
35 ಭಟ್ಟರ್ರಿಗೆಉ್ರತ್ತಿ ೧ ವಂದುಶ್ರೀವತ್ಸಗೋತ್ರದಆಪಸ್ತಂಭಸೂತ್ರದಯಜುಶಾಖಾ
36 ಧ್ಯಯನರಾದಶ್ರೀನಿವಾಸೈಯ್ಯಂಗ್ಗಾರಪಉತ್ರರಾದಲಿಂಣಾಪ್ಪೈಯನಪುತ್ರರಾದ
37 ರಂಗ್ಗನಾಥೈಯ್ಯಂಗಾರಿಗೆಉ್ರತ್ತಿ ೧ ವಂದುಭಾರದ್ವಾಜಗೋತ್ರದಆಪಸ್ತಂಭ
38 ಸೂತ್ರದಯಜುಶಾಖಾಧ್ಯಯನರಾದವೆಂಕಟೈಯನಪಉತ್ರರಾದತಿಂಮರಸೈಯ
39 ನಪುತ್ರರಾದವೆಂಕಟಕ್ರುಷ್ಣಭಟ್ಟರಿಗೆಉ್ರತ್ತಿ ೧ ವಂದುಹಾಗೆಹಂನೆರಡೂಮುಪ್ಪಾಗಉ್ರತ್ತಿಯ
40 ನೂಯಿೂತಥಾತಿಥಿಸೋಮೋಪರಾಗಪುಂಣ್ಯಕಾಲದಲ್ಲಿಸಹಿರಂಣ್ಯೋದಕದಾನಧಾ
41 ರಾಪೂರ್ವಕವಾಗಿತ್ರಿವಾಚಾಕ್ರುಷ್ಣಾರ್ಪಣವಾಗಿಕೊಟ್ಟೆವಾಗಿಈಗ್ರಾಮಕ್ಕೆಸಲುವ
42 ಅಕ್ಷಿಣ್ಯಾಗಾಮಿನಿಧಿನಿಕ್ಷೇಪಜಲಪಾಷಾಣಸಿದ್ಧಸಾಧ್ಯಂಗಳೆಂಬಅಷ್ಟಭೋಗಸ್ವಾ
43 ಮ್ಯವನೂಆಗುಮಾಡಿಕೊಂಡುನಿಂಮಸಂತ್ತಾನಪರಂಪರಾಆಚಂದ್ರಾರ್ಕ
44 ಸ್ಥಾಯಿಗಳಾಗಿದಾನಾಧಿವಿನಿಮಯವಿಕ್ರಯಂಗಳಿಗೆಯೋಗ್ಯವಾಗಿಸುಖದಲ್ಲಿ
45 ಅನುಭವಿಸಿಕೊಂಡುಬಾಹದೂಯೆಂದುಬರಸಿಕೊಟ್ಟಶಾಸನ | ಯಿದಕ್ಕೆ
46 ಧರ್ಮಸಾಕ್ಷಿಗಳು | ಆದಿತ್ಯಚಂದ್ರಾವನಿಲೋನಲಶ್ಚಾದ್ಯಉಭೂರ್ಮಿರಾಪೋ
47 ಹ್ರುದಯಂಯಮಶ್ಚಅಹಶ್ಚಾರಾತ್ರಿಶ್ಚಉಭೇಚಸಂಧ್ಯೇಧರ್ಮಸ್ಯಜಾನಾತಿ
48 ನರಸ್ಯಉ್ರತ್ತಂ | ದಾನಪಾಲನಯೋರ್ಮಧ್ಯೇದಾನಾಛ್ರೇಯೋನುಪಾಲನಂ | ದಾನಾತ್ಸ್ವರ್ಗ
49 ಮವಾಪ್ನೋತಿಪಾಲನಾದಚ್ಯುತಂಪದಂ | ಸ್ವದತ್ತಾಪುತ್ರಿಕಾಧಾತ್ರೀಪಿತ್ರುದತ್ತಾಸ
50 ಹೋದರೀಅನ್ಯದತ್ತಾಸ್ವಮಾತಾಚಾದತ್ತಾಂಭೂಮಿಂಪರಿತ್ಯಜೇತುಪ
51 ಕೈವಭಗಿನೀಲೋಕೇಸರ್ವೇಷಾಮೇವಭೂಭುಜಾಂನಭೋಜ್ಯಾನಕರಗ್ರಾ
52 ಹ್ಯಾವಿಪ್ರದತ್ತಾವಸುಂಧರಾ | ಮದ್ವಂಶಜಾಃಪರಮಹೀಪತಿವಂಶಜಾವಾಯೇವೈ

[53] ನ್ರುಪಾಸ್ಸತತಮುಜ್ವಲಧರ್ಮಚಿತ್ತಾಃಮುದ್ಧರ್ಮಮೇವಸತತಂಪರಿಪಾಲಯಂತಿ
[54] ತತ್ಪಾದುಕಾದ್ವಯಮಹಂಸಿರಸಾವಹಾಮಿ |

ಶ್ರೀಕೃಷ್ಣ.

5

ಅದೇ ಹೋಬಳಿ ಮುತ್ತಿಗೆ ಗ್ರಾಮಕ್ಕೆ ಪೂರ್ವ ರಂಗಾಚಾರ್ಯರ ಹೊಲದಲ್ಲಿರುವ ವೀರಕಲ್ಲು.

ಪ್ರಮಾಣ 4′ × 5′.

[1] ಸ್ವಸ್ತಿನೀತಿಮಾರ್ಗ್ಗಕೊಙ್ಗುಣಿವರ್ಮ್ಮಧರ್ಮ್ಮಮಹಾರಾಜಾಧಿರಾಜಕೊವಳಾಳ
[2] ಪುರವರೇಶ್ವರಾನನ್ದಿಗಿರಿನಾಥಶ್ರೀಮತ್‌ರಾಚಮಲ್ಲಪೆರ್ಮ್ಮಾನಡಿಗಳ್
[3] ಕೊಮ್ಮಾಳೆಯೊಳ್‌ಸ್ವಗ್ಗರ್ಮೇಱಿದೊಡೆಬಿದನ್ತೆರಾಚೆಯಂ
[4] ಮುಟ್ಟಿಗೆಯಕಲ್ನಾಡು
[5] ವಡೆದುಕಿಳ್ಗುವೊಕ್ಕೆ
[6] ಕೊಟ್ಟಾನೆಱಿಯಪ್ಪಪೆ
[7] ರ್ಮ್ಮಾನಡಿಪಡೆದೆದೋರ್
[8] ಇದಬರೆದೊಂಪರಸುರಾಮ
[9] ಯ್ಯಮಂಗಳಮಹಾ
[10] ಶ್ರೀ ||

6

ಅದೇ ಹೋಬಳಿ ಶಂಭುನಾಥಪುರದಲ್ಲಿ ಶಂಭುನಾಥೇಶ್ವರ ದೇವಸ್ಥಾನಕ್ಕೆ ಪಶ್ಚಿಮ ನೆಟ್ಟ ಕಲ್ಲು.

ಪ್ರಮಾಣ 2′ 6″ × 2′.

. . . .

[4] ಮಲೆರಾಜರಾಜಮಲೆಪರೊಳ್ಗಂಡಗಂಡಭೇರುಂಡಕದನಪ್ರಚಂಡನಸಹಾಯಸೂರಭಲದಂಕರಾಮ
[5] . . ಸನಿವಾರಸಿದ್ಧಿಮಗರರಾಜ್ಯನಿರ್ಮೂಲನ . . . ಪಾಂಡ್ಯರಾಯಪ್ರತಿಷ್ಟಾಚಾರ್ಯ್ಯಶ್ರೀ
[6] ಮನ್ಮಹಾಪ್ರತಾಪಚಕ್ರವರ್ತ್ತಿಹೊಯ್ಸಣ . . ಹದೇ . . ಶ್ರೀಮದ್ರಾಜಧಾನಿದೋರಸಮುದ್ರದನೆಲೆವೀಡಿನೊಳ್
[7] ಸುಕಸಂಕಥಾವಿನೋದದಿಂಪ್ರಿಥ್ವೀರಾಜ್ಯಂಗೆಯ್ಯುತ್ತಿರಲುಸಕವರುಷಂ ೧೩೧೨ ನೆಯವಿರೋಧಿಸಂವತ್ಸರದ
[8] ವೈಶಾಖಸು ೭ ಆದಂದುಕೊಂಗನಾಡಅರನೆಲೆ . . . ಸ್ವಯಂಭು . . ಅಮೃತಪಡಿನಂದಾದೀವಿಗೆಗೆಸನಿ . ಸಮ
[9] ಸ್ತ . . ಹಿತಂ . . . . ಧಾರಾಪೂರ್ವಕಂಮಾಡಿ . . ಶ್ರೀಮನುಮಹಾಮಂಡಲೇಶ್ವರಆಚಾರಶ್ರೀ
[10] . ರುಂಚತುರ್ವೇದ . ಬ್ರಹ್ಮಚಾಳುಕ್ಯರುಂ . . ಸಿಂಹದೇವರಸರಮೂವಂಡಿಸುಕುವರಕಾಳದೇವರಸರ
[11] . . . ಸುಮಾದ . . . ಯಜೀವಿತಕ್ಕೆಆನಾರಸಿಂಹದೇವರ್ಸರು . . . . ಕಾರುಂಣ್ಯವಮಾಡಿ
[12] . . . ಅರಮನೆಯಅಧಿಕಾರಿ . . ಆನಾಯಕರಮಕ್ಕಳುಕೇಶವ . . ರ್ಸರಮಕ್ಕಳುದೇವರ್ಸರುಅ
[13] . . ಸುಂಕದಅಧಿಕಾರಮಾಡುವಲ್ಲಿಆಸ್ವಯಂಭುನಾಥದೇವರಅಮೃತಪಡಿನಂದಾದೀವಿಗೆಗೆಆಅರಿಕೆಱಿಗೊಡಿಗೆ

14 ಸಲುವಲಿಯಕೆನಾಯಕನಹಳ್ಳಿಯೊಳಗೆ . . ಉ . . ಡಭಂಡಿಗೆಮಾರ್ಗ್ಗಲುಸ್ಥಳಸುಂಕಕ್ಕೆಸಲುವಕ
15 . ಕೊಟ . ಮದಿವೆಯೊಳಗಾದಯೇನುಳ್ಳಸುಂಕವನೂ . . ಸ್ವಯಂಭು . ಅವ್ರಿತಪಡಿನಂದಾದೀ ವಿಗೆಗೆಸ
16 . . . . ನಾಯಕರೂದೇವರ್ಸ್ಸರುಆಶ್ರೀಸ್ವಯಂಭುಸನ್ನಿಧಿಯಲಿಧಾರಾಪೂರ್ವ
17 ಕಂಮಾಡಿಕೊಟ್ಟಸಿಲಾಸಾಸನಯಿಂತಪ್ಪುದಕ್ಕೆಆಕೇಶವನಾಯ್ಕರದೇವರ್ಸ್ಸರಸ್ವಹಸ್ತವಪ್ಪಅವರಅನುಮ ತ್ಯದಿಂಅವರಸೇನ
18 ಬೋವಲಿಂಗಂಣನಬರಹಯಿದಮ್ರ್ಮವನುಯಿಸುಂಕದಧಿಕಾರಿಗಳುಆಳಿದವರುಕೆಡಿಸದೆನಡಸುವರುಸ್ವ ದತ್ತಾಂಪ
19 ರದತ್ತಾಂವಾಯೋಹರೇತವಸುಂಧರಾ | ಶಷ್ಟಿರ್ವರುಷಸಹಸ್ರಾಣಿವಿಷ್ಟಾಯಾಂಜಾಯತೇಕ್ರಿಮಿ | ಯಿಧಮ್ರ್ಮಕ್ಕೆ
20 ಆರುಪ್ರತಿಕೂಲರಾಗಿಭಂಗಿಪರುಗಂಗೆಯತಡಿಯಲಿಕವಿಲೆಯನುಬ್ರಾಂಹಣರನುಕೊಂದದೋಶದಲಿ ಹೋಹ
21 ರುಯಿಧಮ್ರ್ಮವನುಆರುಕೆಡ್ಸಿದರುನಾಡಿಂಗೆದ್ರೋಹಿಗಳುಹದಿನೆಂಟುಸಮಯಕ್ಕೆದ್ರೋಹಿಗಳು

*ಶ್ರೀಏಕ್ಕನಾಥೆಶ್ರೀಮಹಾಲಕ್ಷ್ಮೀ

7

ಅದೇ ಹೋಬಳಿ ಹರದೂರು ಗ್ರಾಮಕ್ಕೆ ಪೂರ್ವ ಮಂಟಪದಲ್ಲಿ ನಟ್ಟ ವೀರಕಲ್ಲು.

ಪ್ರಮಾಣ 2′ 6″ × 2′ 6″.

1 ರಉದ್ರಿಸಂವತ್ಸರದಭಾದ್ರಪ[ದ]ಶುಧ ೧ ಲು
2 ತಿಪರಸಯನಮಮ್ಮಗಹುಲುಣಿದೇವ
3 ರಸಯ್ಯನವರುಹರದುರಪುರದ
4 ಸ್ತಳದಜಾತ್ರೆಸಂತೆಅಡದೆಜಿಿವು
5 ಗ್ಗದೆಜಿಿಯಿಟ್ಟನುದೇವರಿಗೆಸಬ್ವಿವು
6 ನ್ಯಯಿಸ್ತಳದಸುಂ[ಕ]ವನುಹಾಗೆಆರೊ
7 ಬರುಅಳುಪಿದರೆಹಿಂದೆಸುಂಕ
8 . . . .

8

ಅದೇ ಗ್ರಾಮದ ಲಕ್ಷ್ಮೀದೇವಿಯ ಗುಡಿಯಲ್ಲಿದ್ದ ಕಲ್ಲು.

ಪ್ರಮಾಣ 2′ 3″ × 1′ 6″.

1 ಶುಭಮಸ್ತುವಿಕ್ರಮಸಂವತ್ಸರದಭಾ
2 ದ್ರಪದಬ ೧೦ ಶ್ರೀಮಹದೇವದೇ
3 ವ್ರೋತ್ತುಮಶ್ರೀಹರದೂರತಿರು
4 ವೆಂಗಳನಾಥನಅಂಗರಂಗಭೋಗ
5 ಅವ್ರುತಪಡಿಗೆಮಾನ್ಯವಾಗಿಬೇಲೂರಮಲ್ಲರಸಅಯ
6 . . . . ಹರದೂರಲ್ಲಿಆವನೊಬಅರಸು . .
. . . .

* ನಾಗರಾಕ್ಷರದಲ್ಲಿ.

9

ಅದೇ ಹೋಬಳಿ ಬಸವನಹಳ್ಳಿ ಗ್ರಾಮಕ್ಕೆ ಪಶ್ಚಿಮ ರಚ್ಚೇಕಟ್ಟೆಗೆ ಹಾಕಿರುವ ಶಾಸನದ ನಕಲು*.

ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇತ್ರೈಲೋಕ್ಯನಗರಾರಂಭಮೂಲಸ್ತಂಭಾಯಶಂಭವೇ
ಹರೇರ್ಲೀಲಾವರಾಹಸ್ಯದಂಷ್ಟ್ರಾದಂಡಸ್ಸಪಾತುನಃ ಹೇಮಾದ್ರಿಶಿಖರಾಯತ್ರಧಾತ್ರೀಛತ್ರಶ್ರಿಯಂದ
ಧೌಸ್ವಸ್ತಿಶ್ರೀವಿಜಯಾಭ್ಯುದಯಶಾಲಿವಾಹನಶಕವರ್ಷಂಗಳು ೧೫೮೦ ನೇಸಲ್ಲುವವರ್ತಮಾನಕ್ಕೆ
ವಿಳಂಬಿನಾಮಸಂವತ್ಸರದಮಾಘಶುದ್ಧ ೧೫ ಸೋಮವಾರಸೋಮೋಪರಾಗಪುಣ್ಯಕಾಲದಲ್ಲುಶ್ರೀಮದ್ರಾ
ಜಾಧಿರಾಜರಾಜಪರಮೇಶ್ವರಪ್ರವುಢಪ್ರತಾಪವೀರನರಪತಿಯಾದಂಥಾಕೃಷ್ಣರಾಜಮಹಾರಾಯ
ರೈಯನವರುಘನಗಿರಿಶಿಖರದಲ್ಲುಕನಕಸಿಂಹಾಸನಾರೂಢರಾಗಿಪೃಥ್ವೀಸಾಂಬ್ರಾಜ್ಯಂಗೈಯ್ಯುತ್ತಿ
ರಲುಅವರಕಾರ್ಯಕ್ಕೆಕರ್ತುಗಳಾದಶ್ರೀಮತ್‌ಶಿಂಧುಗೋಪಾಳಹಿಮಕರಖಂಡಧವಳಾಂಕಭೀ
ಮಬಿರಿದಸಪ್ತಾಂಗಹವಣಿಮಣಿನಾಗಪುರವರಾಧೀಶ್ವರರಾದಕಾಶ್ಯಪಗೋತ್ರದಆಪಸ್ತಂಭಸೂ
ತ್ರದಬೇಲೂರುವೇಂಕಟಾದ್ರಿನಾಯಕರಪೌತ್ರರಾದಕೃಷ್ಣಪ್ಪನಾಯಕರಪುತ್ರರಾದವೆಂಕಟಾ
ದ್ರಿನಾಯ್ಕರವರುನಾನಾಗೋತ್ರದನಾನಾಸೂತ್ರದನಾನಾಶಾಖಾಧ್ಯಾಯಿಗಳಾದಂಥಾ
ಚೂಡಾಮಣಿಭಟ್ರುಭಾಸ್ಕರವೆಂಕಂಭಟ್ರುದರ್ಭಲರಾಮಾಭಟ್ರುಶೇಷಾಚಾರ್‍ರು
ಯೋಗಂಭಟ್ಟರುವಿಶ್ವೇಶ್ವರಸ್ವಾಮಿಯವರುಯಿಂತಿವರುಗಳಿಗೆಬರಶಿಕ್ಕೊಟ್ಟಭೂದಾನಶಿ
ಲಾಶಾಸನಕ್ರಮವೆಂತೆಂದರೆಪೂರ್ವದಲ್ಲಿಯೆಲಿಕೃಷ್ಣರಾಯರೈಯನವರುನಮ್ಮವೃ
ದ್ಧಪ್ರಪಿತಾಮಹರಾದಂಥಾಯರ್‍ರಕೃಷ್ಣಪ್ಪನಾಯ್ಕರೈಯ್ಯನವರಿಗೆಅಮರವಮಾ
ಗಣಿಯಾಗಿಪಾಲಿಸ್ತಬೇಲೂರುಶೀಮೆಗೆಸಲ್ಲುವಬಿಳುಹನಾಡುವಳಿತವಾದಅ
ರಕಲಗೂಡುಹೋಬಳಿಶ್ಯಾನುಭೋಗನಹಳ್ಳಿಗೆಪೂರ್ವೈಲಿವಾಲಕ್ಕೆಪಶ್ಚಿಮಹೇಮಾ
ವತಿಗೆದಕ್ಷಿಣಗುಂಡೀಹೊಸ್ಸಹಳ್ಳಿಗೆವುತ್ತರವಾದಂಥಾಬಸವನಹಳ್ಳಿಅಗ್ರಹಾರವಂನ್ನು
೬ || ಕ್ಷೇತ್ರವನ್ನುಮಾಡಿಯಿಸೋಮೋಪರಾಗಪುಣ್ಯಕಾಲದಲ್ಲುನರಸಿಂಹದೇವ
ರಸಂನ್ನಿಧಿಯಲ್ಲಿಕಾಶ್ಯಪಗೋತ್ರದಆಪಸ್ತಂಭಸೂತ್ರದವೆಂಕಟಾದ್ರಿನಾಯ್ಕರಪೌ
ತ್ರರಾದಕೃಷ್ಣಪ್ಪನಾಯ್ಕರಪುತ್ರರಾದವೆಂಕಟಾದ್ರಿನಾಯ್ಕರುನಾನಾಗೋತ್ರ
ದನಾನಾಸೂತ್ರದನಾನಾಶಾಖಾಧ್ಯಾಯಿಗಳಾದಚೂಡಾಮಣಿಭಟ್ಟರು
ಭಾಸ್ಕರವೆಂಕಂಭಟ್ಟರುದರ್ಭಲರಾಮಾಭಟ್ಟರೂಶೇಷಾಚಾರ್‍ರುಯೋಗಂ
ಭಟ್ಟರುವಿಶ್ವೇಶ್ವರಸ್ವಾಮಿಯವರಿಗೆಬಸವನಹಳ್ಳಿಯಂಬಅಗ್ರಹಾರಕ್ಕೆಪ್ರತಿನಾ
ಮಧೇಯವಾದವೆಂಗಟಾಪುರವೆಂಬೂರನ್ನು ೬ || ಕ್ಷೇತ್ರವನ್ನುಮಾಡಿನಂಮ್ಮಮಾ
ತಾಪಿತರುಗಳಿಗೆಅನೇಕಪುಣ್ಯವಾಗಲಿಯೆಂದುಸಹಿರಂಣ್ಯೋದಕದಾನಧಾರಾ
ಪೂರ್ವಕವಾಗಿಶ್ರೀಕೃಷ್ಣಾರ್ಪಣವಾಗಿನಿಮಗೆಕೊಟ್ಟೆವಾಗಿನಿಂಮ್ಮನಿಂಮ್ಮಕ್ಷೇತ್ರ
ಕ್ಕೆಸಲ್ಲುವಗ್ರಹಾರಾಮುಕ್ಷೇತ್ರನಿಧಿನಿಕ್ಷೇಪಅಕ್ಷೀಣಿಆಗಾಮಿಜಲತರು
ಪಾಷಾಣಶಿದ್ಧಸಾಧ್ಯಂಗಳೆಂಬಅಷ್ಟಭೋಗತೇಜಸ್ವಾಂಮ್ಯಂಗಳಂನ್ನುಅನು
ಭವಿಶಿಕ್ಕೊಂಡುನಿಮ್ಮಪುತ್ರಪೌತ್ರಪಾರಂಪರ್ಯವಾಗಿಆಚಂದ್ರಾರ್ಕಸ್ಥಾಯಿಗಳಾಗಿ
ದಾನಾಧಿವಿನಿ[ಮ]ಯವಿಕ್ರಯಗಳೆಂಬವ್ಯವಹಾರಚತುಷ್ಟಯಂಗಳಿಗೆಯೋ
ಗ್ಯರಾಗಿಅನುಭವಿಶಿಕ್ಕೊಂಡುಬರುವದುಯೆಂದುಕಾಶ್ಯಪಗೋತ್ರದಆಪಸ್ತಂಭಸೂತ್ರ

---

*ಸ್ಥಳದವರಿಂದ ಬಂದದ್ದು.

ದವೆಂಗಟಾದ್ರಿನಾಯ್ಕರಪೌತ್ರರಾದಕೃಷ್ಣಪ್ಪನಾಯ್ಕರಪುತ್ರರಾದವೆಂಗಟಾದ್ರಿನಾಯ್ಕ
ರುನಾನಾಗೋತ್ರದನಾನಾಸೂತ್ರದನಾನಾಶಾಖಾಧ್ಯಾಯಿಗಳಾದಚೂಡಾಮಣಿ
ಭಟ್ಟರುಭಾಸ್ಕರವೆಂಕಂಭಟ್ಟರುದರ್ಭಲರಾಮಾಭಟ್ಟರುಶೇಷಾಚಾರ್ರು
ಯೋಗಂಭಟ್ಟರುವಿಶ್ವೇಶ್ವರಸ್ವಾಮಿಯುವರಿಗೆಸಹಾಬರಿಶಿಕೊಟ್ಟದಾನಶಿಲಾಶಾ
ಸನಾಧರ್ಮಸಾಕ್ಷಿಗಳುಆದಿತ್ಯಚಂದ್ರಾವನಿಲೋನಲಶ್ಚಾದ್ಯಾಭೂರ್ಮಿ
ಮಿರಾಪೋಹೃದಯಂಯಮಶ್ಚಅಹಶ್ಚರಾತ್ರಿಶ್ಚವುಭೇಚಸಂಧ್ಯೇಧರ್ಮಶ್ಚಜಾ
ನಾತಿನರಸ್ಯವೃತ್ತಂದಾನಪಾಲನಯೋರ್ಮಧ್ಯೇದಾನಶ್ರೇಯೋನಪಾಲನಂದಾನಾತ್
ಸ್ವರ್ಗಮವಾಪ್ನೋತಿಪಾಲನಾದಚ್ಚುತಂಪದಂಇಂದ್ರಃಪೃಛ್ಚತಿಚಂಡಾಲೀಂಕಿ
ಮಿದಂಪೃಥತೇತ್ವಯಾಕಾಕಮಾಂಸಂಸುರಾಸಿಕ್ತಂಕಪಾಲೇನಚಿತಾಗ್ನಿನಾ ದೇ
ವಬ್ರಾಂಹ್ಮಣವಿತ್ತಾನಿಬಲಾದಪಹರಂತ್ಯಜೇತುತೇಷಾಂಪಾದರಜೋಭೀ
ತ್ಯಾಚರ್ಮಣಾಪಿಹಿತಂಮಯಾ

ಶ್ರೀವೆಂಕಟೇಶಪ್ರಸಂನ್ನಾ.

10

ಅದೇ ಗ್ರಾಮಕ್ಕೆ ಪಶ್ಚಿಮ ಕಲ್ಲುಕಟ್ಟೆಗೆ ಸಮೀಪದಲ್ಲಿರುವ ಕಲ್ಲು.

ಪ್ರಮಾಣ 6′×2′ 6″.

. . . .

7 . . . . ವೆಂಕಟಾದ್ರಿನಾಯಕಕೃಷ್ಣಪ್ಪನಾ
8 ಯಕರಕುಮಾರವೆಂಕಟಾದ್ರಿನಾಯಕರವರು

. . . .

12 ಬೇಲೂರಿಗೆಸಲುವಬಿಳವನಾಡಅರಕಲ
13 ಗೂಡು . . . ಬಸವನಹಳ್ಳಿಯನುಕ್ರಿ
14 ಷ್ಣಾಪುರವೆಂದುಪ್ರತಿನಾಮಧೇಯವಮಾಡಿವು
15 . . . . ಸಂಪಂನರಾದಬ್ರಾಹ್ಮರಿಗೆಸಹಿರ
16 ಣ್ಯೋದಕದಾನಧಾರಾಪೂರ್ವಕ
17 . . . .

(ಕಲ್ಲಿನ ಎರಡು ಕಡೆಯಲ್ಲೂ ಬರೆದಿಥೆ ಅಕ್ಷರಗಳು ಕಾಣುವದಿಲ್ಲ)

11

ಅದೇ ಹೋಬಳಿ ವಡ್ರಹಳ್ಳಿಯಲ್ಲಿ ತಿಂಮಶೆಟ್ಟಿ ರಂಗಶೆಟ್ಟಿಯ ಹೊಲದಲ್ಲಿದ್ದ ವೀರಕಲ್ಲು.

ಪ್ರಮಾಣ 6′ 6″×3′ 6″.

1 . . ಎಱಿತಿಯ
2 ಪ್ಪಕೊಟ್ಟಳಿಪಡೆ
3 ದಮಲ್ಛಿಮಜ್ಜಗಳ
4 ಯು
5 ಶ್ರೀಪ . ರಕಾಳೆಗ
6 . . ದೊಳಬು

7 . ಬಿವಮ್ಮಾತರಸರ
8 ನುಮ . . . ಕಾಳೆಗಂ
9 ದೊಸತ್ತ ಎದ್ದಲ್ಲಿ . .
10 . . . ದೇವಯಾ
11 . . ಸ್ವರಆವಲಗೆಯಕರುಗ್ಗಂಸತ್ತಭರ

12

ಅದೇ ಹೋಬಳಿ ಮಳಲಕೆರೆ ಗ್ರಾಮಕ್ಕೆ ಈಶಾನ್ಯ ಈಶ್ವರ ದೇವಾಲಯದ ಮುಂದೆ ಬಿದ್ದಿರುವ ಕಲ್ಲು.

1 ಶ್ರೀಮತ್ಪರಮಗಂಭೀರಸ್ಯಾದ್ವಾದಾಮೋಘಲಾಂಛನಂ | ಜೀಯಾತ್ತ್ರೈಳೋಕ್ಯನಾಥಸ್ಯಶಾಸನಂಜಿನ
2 ಶಾಸನಂ || ಭದ್ರಂಭೂಯಾಜ್ಜಿನೇಂದ್ರಾಣಾಂಶಾಸನಾಯಾಘನಾಶಿನೇ | ಕುತೀರ್ತ್ಥಧ್ವಾಂತಸಂಘಾತಪ್ರ
3 ಭಿನ್ನಘನಭಾನವೇ || ವ್ರ || ಯದುವಂಶಕ್ಷಿತಿಪಾಳಕಂಶಶಪುರೀವಾಸಂತಿಕಾ . . . ನ್ಮದವಾಗಿಪ್ಪಿನ . .
4 ಬುರಾಜಿತ . . . ಮೇಲ್ಪಾಯೆಶಾರ್ದ್ದೂಳ . . . . ಜೈನಮುನೀಶ್ವರಂಪಿಡಿದ . . . . ಪೊಡೆದಂ . . . . .
5 ಆಹೊಯ್ಸಳಾನ್ವಯದೊಳ್ || ವ್ರ || ಭೂನಾಥಾಸೇವ್ಯಪಾದಂನಿಖಿಳರಿಪುಮಹೀಪಾಳವಿಧ್ವಂಶಕೇಳೀಕೀನಾಶಂವೈರಿಭೂಭೃನ್ನೃಗಗಹನ
6 ದವನ್ಮಾನೆದುರ್ಗ್ಗಪ್ರ . . . ನಾ . . ರಾಮನೇತ್ರೋಭ | ಯಶನ . . ಶ್ರೀಲಲಾಮಂತಾನೆಂದೀವಿಶ್ವಲೋಕ . . .
7 ಸಲಿಸಿದಂವೀರಬಲ್ಲಾಳಭೂಪಂ || ಗೋಪತಿಗಾತಪನಿಕರಂಗೋಪತಿಗೆ . . . . ವಾಗೊದಡಂಗೋಪತಿಯಾದಂತಾಗೋಪತಿಬ
8 ಲ್ಲಾಳಗಾತ್ಮಜಂನರಸಿಂಹಂ || ವ್ರ || ಜಿತ್ವಾವೈರಿನರೇಂದ್ರಚಕ್ರಮಖಿಳಂಸಂಗ್ರಾಮರಂಗೇಭವನ್ಭೂಚಕ್ರಂಲವಣಾಬ್ಧಿವೇಷ್ಟಿತಮಿದಂಸ್ವೀಕೃತ್ಯ
9 . . ದ್ರಿಕ್ರಮಾ . ಶ್ವರವೈಷ್ಣವಾಹುತಮಹೋತನ್ಮುಖ್ಯಚಕ್ರಂಸದಾಶ್ರೀಸೋಮೇಶ್ವರದೇವಯಾದವ . . ತಿಸಂ . . . . . .
10 ಭಾಮಾನೀಕಮನೋಜಂಭೀಮಾಹಿತದೈತ್ಯತತಿಗೆದಶರಥರಾಮಂಸೋಮಂಸುಜನಸುಧಾಬ್ಧಿಗೆಸೋಮೇಶ್ವರದೇವನೆಂದುವ
11 ರ್ಣ್ನಿಪುದುಜಗಂ || ವ || ಸ್ವಸ್ತಿಸಮಧಿಗತಪಂಚಮಹಾಶಬ್ದಮಹಾಮಂಡಳೇಶ್ವರಂದ್ವಾರಾವತೀಪುರವರಾಧೀಶ್ವರಂವಿದ್ವಿಷ್ಣ
12 ಶಾ(ಕ)ಕರವಿಧುಂತುದಂ | ಕಳಿಂಗಮತ್ತಮಾತಂಗಮಸ್ತಕವಿದಾರಣೋತ್ಕಂಠಕಂಠೀರವಂಸೇವು[ಣೋ]ರ್ಬ್ಬೀಪಾಳಾರಂಣ್ಯದಾವಾ
13 ನಳಂ | ಮಾಳ್ವಮಹೀಪಾಳಾಂಭೋಧಿಕುಂಭಸಂಭವಂ | ವಾಸಂತಿಕಾದೇವೀಲಬ್ಧಲಸಿತಪ್ರಸಾದ | ಯಾದವಕುಳಾಂಬರದ್ಯು[ಮ]ಣಿ | ಸ
14 ಮ್ಯಕ್ತ್ವಚೂಡಾಮಣಿ | ಮಲೆರಾಜರಾಜಮಲೆಪರೊಳುಗಂಡಗಂಡಭೇರುಂಡಕದನಪ್ರಚಂಡಸನಿವಾರಸಿದ್ಧಿಗಿರಿದುರ್ಗ್ಗಮಲ್ಲ
15 ಚಲದಂಕರಾಮನಸಹಾಯಶೂರನೇಕಾಂಗವೀರಂ | ಮಗರರಾಜ್ಯನಿರ್ಮ್ಮೂಳನಕರಂ | ಚೋಳರಾಜ್ಯಪ್ರತಿಷ್ಠಾಚಾರ್ಯ್ಯಂ | ಪಾಂಡ್ಯಕುಳಸಂರಕ್ಷ
16 ಣದಕ್ಷದಕ್ಷಿಣಭುಜಂ | ಭುಜಬಲಾರ್ಜ್ಜಿತಾನೇಕನಾಮಪ್ರಶಸ್ತಿಸಮಾಳಂಕೃತಂ | ಶ್ರೀಮದ್ಗಂಗಹೊಯ್ಸಳಪ್ರತಾಪಚಕ್ರವರ್ತ್ತಿ

[17]ವೀರಸೋಮೇಸ್ವರದೇವರುದಕ್ಷಿಣಮಂಡಳಮಂದುಷ್ಟನಿಗ್ರಹಶಿಷ್ಟಪ್ರತಿಪಾಳನಪೂರ್ವ್ವಕಂರಾಜ್ಯಂಗೆಯ್ವುತ್ತಮಿರೆ । ತತ್ಪಾದಪದ್ಮೋ
[18]ಪಜೀವಿಸೇನಾನಾಥಶಿರೋಮಣಿವಂದಿಜನಚಿಂತಾಮಣಿಸುಜನವನಜವನಪತಂಗಂರಾಜದಳಪತ . . ಸಲಿಗಂಕಲಿಗಳಂ
[19]ಕುಶಸ್ವಾಮಿದಂಡೇಶನೆಂತಪ್ಪನೆಂದಡೆ || ವೃ || ಶ್ರೀಯಂವಿಸ್ತೀರ್ಣ್ಣವಕ್ಷಸ್ಥಳನಿಳೆಯದೊ . . . ಹಿತೋರ್ಪ್ಪ . . ಶ್ರೀಯಂಕೂ
[20]ರ್ಬ್ಬಳಕೇಳೀಸದನದೊಳೊಲವಿಂತಾಳ್ದಿವಿಖ್ಯಾತಕೀರ್ತ್ತಿಶ್ರೀಯಿಂದಾಶಾಂತಮಂರಂಜಿಸೆನಿಜವಿಜಯ . . . ತಿಸ್ವಾಂತಜಾತಂ . . .
[21]ಯ್ಯಂಸೈನ್ಯಾಧಿನಾಥಂನೆಗಳ್ದನುರುಗುಣಸ್ತೋಮನುರ್ವ್ವೀಲಲಾಮಂ || ಆತನನುಜಂ || ಕ || . ರುದತ್ತ . . . ಪ . .
[22] . . ಸಿರಮಂಬ್ರಹ್ಮಸೇವ್ಯನಾದಂಕ್ಷಿಪ್ರಂಧುರದೊಳತಿಚತುರಂನಿಜತನುಲಿಯವೀರತತಿಗೆಸಿರದಾಕೇತಿಯ . . ||
[23]ಆಮಂತ್ರಿ || ಮಾಳಿನೀ || ಮನುಚರಿತನುದಾರಂವತ್ಸಮಂತ್ರಿಪ್ರಗಲ್ಭಂಜನಸದನಸಮಾ . . . . ಥಾರಸಾರಾನುಶಾಸಂತನಗೆ . . . .
[24]ಪ್ಪಿದಂಪೂರ್ಣ್ನಪುಣ್ಯಂಜನನುತವಿಜಯಣ್ಣಂಮಂತ್ರಿಗೋತ್ರಾಗ್ರಗಂಣ್ಯಂ || . . . ಕಾಮಂಕಮನೀಯಗುಣಂವಿನುತಶಿರೋಜಬಂಧಲಲಿತ . .
[25]ಶ್ರೀಮಜಿನಪದನಳಿನಶಿಲೀಮುಖನಕ್ಷತಾಂಶು . . ಪ್ರಸರಂಕೀರ್ತ್ತಿಜನನೀಜನಕರು || ಲೋಕಾಶ್ಚರ್ಯನಿಯೋ
[26]ಗಯೋಗನಿಪುಣಂದುರ್ಗ್ಗಾಂಬಿಕಾವಲ್ಲಭಂನಾಕಯ್ಯಂಭುವನಾಭಿರಾಮಚ . . . . ನೆಂಬಿನಂಕೊಂಗದೇಶೈಕಶ್ರೀಕರಣಾಗ್ರಗಣ್ಯ
[27]ನೆಸೆದಂತತ್ಸೂನುಕಾಮಾನುಜಾಶಾಕೀರ್ಣ್ನಯತಕೀರ್ತ್ತಿಕಾಂತನೆಸೆವಂಸಾತಂಗುಣಬ್ರಾತದಿಂ . . ಆಕಾಮಾತ್ಮಜರು ||
[28]ಪರಮಜಿನಚರಣದಾಮುಂವರವಿದ್ವದ್ವಾರ್ಧಿಸೋಮನಬಳಾಕಾಮಂಕರಣಗಣಾಗ್ರಣಿಸೋಮಂಕಮಳವಾಣೀರಾಮಂ ||
[29]ಸುರಕುಜಕೆಕಾಮಧೇನುಗೆಪರುಸಕ್ಕಿನಸುತಗೆಸಮುಮೆಯ[. .]ಕಾಮಂಸುರ . . . ಪರಿಕಿಸೆಪುರುಸರತ್ನಂನಿರು
[30]ಪಮನೀಸೋಮನಮಳಗುಣಗಣಧಾಮಂ || ಜೀರ್ಣ್ನಜಿನಭವನಮಂಭೂವರ್ಣ್ನಿಸಲು . . . . . ಸರಸಗುಣಸೋಮ
[31]ಕೀರ್ತ್ತಿದಿಗಂತಾಕೀರ್ಣ್ನಮೆನೆಧರ್ಮ್ಮಸಸ್ಯಾಪೂರ್ಣ್ನ . . ಕರ್ಣ್ನ . . . . . ಸಂವರ್ಣ್ನ್ಯಂ || ಸಾತಣ್ಣನೆಂತಪ್ಪಂ ||
[32]ಸಾತಿಸಯಚರಿತಭರಿತಂಭೂತಭವದ್ಭಾವಿಭವ್ಯಜನಸಂಸೇವ್ಯಂಸಾತಂಣ್ಣನಮಳಗುಣಸಂಭೂತಂ
[33]ಜಿನಪದಪಯೋರುಹಾಕರಹಂಸಂ || ಮಲ್ಲಿಕಾಮಾಲೆ || ದೇವದೇವನಶಾಂನ್ತಿನಾಥನಗೇಹಮಂಪೊಸತಾ
[34]ಗಿಸದ್ಭೋಧಿಪ[.]ನೊಳೊಲ್ದುನಿರ್ಮ್ಮಿಸೆತನ್ನಕೀರ್ತ್ತಿದಿಗಂತಮಂತನ್ನಭವ್ಯಚಕೋರಿಚಂದ್ರಮನೆಂದುಬಂದೆಳೆವರ್ಣ್ನಿಸಲ್ಕಾವಣಾವರ
[35]ಜಂವಿಚಿತ್ರಚರಿತ್ರಸಾತಣನೊಪ್ಪುವಂ || ಕ || ಸಾತಣ್ಣನವನಿತೆಗುಣ . . . . ರತ್ನ . . . . .
[36]ದಿಭೂತಳದೊಳ್ನೋಂತಿಲ್ಲವೆಭೋಗವೆಸಾತಿಸ . . ಖ್ಯಾತಿಯಿಂದೆರಂಜಿಸುತಿರ್ಪ್ಪಳು || ಆದಂಪತಿಗಳಗರ್ಬ್ಭದೊ

37 ಳಾದಾರ್ಭಕರೆಸೆವಕಾಮಸಾತಂಗಳವಿದ್ಯಾದಿಗುಣರೂಪಿನೊಳ್ಪಿಂದೊದು . . . . . . ಧರಿತ್ರಿ
ಗೊರ್ವಂಪೊ
38 ಡೆದಂ || ಸ್ವಸ್ತಿಶ್ರೀಮೂಲಸಂಘದೇಸಿಯಗಣಪೊಸ್ತಕಗಚ್ಛಕೊಂಡಕುಂದಾನ್ವಯಸಿದ್ಧೇಸ್ವರ . . ಮಾ
ನಾನೂನ
39 ಚಾರುಚರಿತ್ರಂಶ್ರೀಮಾಘಣಂದಿಸಿದ್ಧಾಂತಚಕ್ರವರ್ತ್ತಿ . . . . . ತಪ್ಪಂ || ವೃ || ಸ್ವಾಂತಭವಪ್ರಸೃ
ತಿ . . ರಸಂ || . . . ||
40 ವರಚಾರಿತ್ರನನೂನಪುಣ್ಯಾಜನನಂ . . . . ಕಭಾಸುರನೀರೇಜಸುಮಿತ್ರನಾರ್ಜ್ಜಿತದಯಾ . . . .
41 ಪವಿತ್ರನೆಂದುಭುವನಂಸಂಕೀರ್ತ್ತಿಸಲ್ವರ್ತ್ತಿಪಂವರಸೈದ್ಧಾನ್ತಿಕಮಾಘಣಂದಿಮುನಿಪಂಶ್ರೀಕೊಂಡಕುಂ
ದಾನ್ವಯಂ || ತಚ್ಛಿಶ್ಯರು || ಕಂ ||
42 ಚಾರುತರಕೀರ್ತ್ತಿದಿಗ್ವಿಸ್ತಾರಿತನತನುಪ್ರತಾಪ . . . . ಯಂಭಾನುಕೀರ್ತ್ತಿವಿ . . . .
43 ಬುಧನಿಕರಂ || ಆಮುನಿಯಶಿಷ್ಯನಖಿಳಕಳಾಮಯನುದಾರಚರಿತನತಿವಿಶದಯಶೋಧಾಮಂಮುನಿ
ಪುಂಗವ . . .
44 ಹಿವರ್ಣ್ಣಿಪುದುಮಾಘಣಂದಿಬ್ರತಿಯಂ || ವೃ || ವರವಿದ್ಯಾಮಹಿತಂಸುರಾಚಳದವೊಲ್ಶ್ರೀಮಘಣಂ
ದಿಬ್ರತೀಶ್ವರನಿರ್ದ್ದಂ . . .
45 ದದ್ರಿಸಾನುಸುಪರೀತಾನೂನಶಿಷ್ಯೌಘಮಂಡಿ . . . ಬ್ರಿತುಳಪ್ರಭೃತಿಯಂತಾರಯ್ಯತಾನಾಜಿಕೊಂ
. . ಮಂಡಲ
46 ವೆಂದೊಡಿಂನವರ(ಂ)ಪೆಂಪಂಪೇಳ್ವೆನೇನೆಂದಡಂ || ವ || ಯಿಂತುವಿರಾಜಿಸುತಿರ್ದ್ದಸಮುದಾಯದಲ್ಲಿ
ಮಾಘಣಂದಿಭಟ್ಟಾರಕರಗುಡ್ಡಂಸೋ
47 ವರಸಸೂನುಸಾತಂಣ್ಣನು . . . . ದೆಂತಪ್ಪುದು || ವೃ || ಜಗತೀಸಂಭೂತಧರ್ಮ್ಮಾಂಕುರ . .
ದೆಂಬಂತೆಭೂಕಾಂ
48 ತೆರಾಗಾಜ್ಜಗದಿಂಪೊತ್ತಿರ್ದ್ದಪೊಂಗೆಲ್ಸದಕಳಸವಿದೆಂಬಂತೆಭವ್ಯಾವಳೀಕೇಳಿಗೆರಮ್ಯಸ್ಥಾನಮೆಂಬಂತಿರೆ
ಸುಕೃತಿಸುಧಾಸೂತಿಬಿಂ
49 ಬೋದಯೈಂದ್ರೀನಗವೇಬಂದಾವಗಂರಂಜಿಸಿದುದುವಸುಧಾಚಕ್ರದೊಳುಜ್ಜೈನಗೇಹಂ || ಕ || ಆಜಿನಭವನ
50 ದೊಳೊಪ್ಪುವಮೂಜಗಪತಿಶಾಂನ್ತಿನಾಥತಂನಮುಳಪದಾಂಭೋಜಂಗಳೊಟಿದುಭವ್ಯಸಮಾಜಂವಂದಿಗೆ
. . . ನುದಿತೋದ
51 ಯಮಂ || ಯಿನ್ತೊಲ್ದುಮಣಲಕೆಱೆಯೊಳ್ಶಾನ್ತೀಶನಿಶಾನ್ತವೆಸೆಯೆನಿರ್ಮ್ಮಿಸಿನಿಖಿಳಾಶಾನ್ನಾಯತಕೀ
ರ್ತ್ತಿ . . . .
52 ಸಾತ(ಂ)ನಿಪ್ಪನುರ್ವ್ವೀವರ್ಣ್ಯಂ || ವ || ಅನ್ತಿರ್ದ್ದುತನ್ನಿಷ್ಟಗೋತ್ರಮಿತ್ರಪುತ್ರಕಳತ್ರಾದಿಸುಖಸಂಭೂ
ತಿನಿಮಿತ್ತಂಸಾತಂಣನಗಂಣ್ಯಾಪುಂ
53 ಣ್ಯಪ್ರಭಾವಂಶಕವರ್ಷದ ೧೧೭೦ ನೆಯಪ್ಲವಂಗಸಂವತ್ಸರದಫಾಲ್ಗುಣಸು ೫ ಆಶ್ರೀಶಾನ್ತಿನಾಥಸ್ವಾಮಿ
ಯಂಪ್ರತಿಷ್ಠೆಯ
54 ಮಾಡಿಯಾಜಿನಪರಿಯರ್ಚ್ಚನೆಗಮಾಹಾರದಾನಕ್ಕಯೆಂದುಬಿಟ್ಟಭೂಮಿಆನಾಡುಸೇನಬೋವವಿಜಯ
ಣ್ಣಸೋವಣ್ಣಮ
55 ದುಕಣ್ಣನುಂಸಮಸ್ತನಾಡಗೌಡುಗಳುಮುಖ್ಯವಾಗಿಸೋವಣ್ಣನುಮಣಲಕೆಱೆಯಲ್ಲಿಮಾಡಿಸಿದ . .
. . . ಚೈತ್ಯಾಲಯಕ್ಕೆ
56 ಬಿಟ್ಟಭೂಮಿಯಸೀಮಾಸಂಮಂಧವೆಂತೆಂದಡೆದೇವಿಯಕೆಱೆಯಕೆಳಗೆಯ . . . . . ಕೆಱೆಯಕ
57 ಟ್ಟಿಸಿಬಿಟ್ಟಗದ್ದೆಯಾಕೆಱೆಯಪಡುವಗೋಡಿಯಲ್ಲಿನಟ್ಟಕಲ್ಲುಬಡಗಮುಂದಾಗಿಹೋದಹಳ್ಳಗದ್ದೆಯಿಂ
ತೋಟಯಾತೋಟದಬಡಗ

58 ಣಕಡೆಹೊಲವೇರೆಯಾಹೊಲವೇರೆ . . . ಮೂಡಣ . ಸೂಲದಕೆಱೆಯ . . ಯಾಕೆಱೆಯಪ
ಡುವಣ . . . .
59 ದುಮೂಡಮುಂತಾಗಿಹೋದಮುಕ್ಕಿಯಗದ್ದೆ ಸೂಲದಕೆಱೆಯುಮೂಗೋಡಿಗದ್ದೆ ಎಲ್ಲೆ || ಸ ೧೦೦ ಯಾ
ಸೀಮೆವಿಡಿದ . . .
60 ತೆಂಕನುಂತಾಗಿವೀರಬದ್ರನಯಾಲದಮರವಿಡಿದುಬರಲುನಟ್ಟಕಲ್ಲು . . ಸೀಮೆಯಾಸೀಮೆವಿಡಿದು
ಪಡುವ . . .
61 ತಾಗಿಬರಲುಬಳ್ಳಿಯಕೆಱೆಯಮೂಡಗೋಡಿಯಲು . . . . . . ಪಡುವಣಸೀಮೆಯು . . . .
. . . . . .
62 . . . . ಬಡಗಣದಾಸಹೊಲವೇರೆ . . . . ಕೆಳಗೆಯಾ . . . . . .
. . . . .
63 ಯದುಸೀಮೆಯಾಕೆಱೆಯತೆಂಕಣಕೋಡಿಯಲ್ಲಿನಟ್ಟಕಲ್ಲು . . . . ಲುಹೊಲ
ವ . . . . . .
64 . . . . ಕೆಱೆಯತೆಂಕಣಭಾಗದಲ್ಲಿ . . . .
ಪಡುವಣಕೋಡಿ
65 ಯಲ್ಲಿನಟ್ಟಕಲ್ಲಾದಿಯಾಗಿಪಡುವಣಕೋಡಿ . . . . ನಲ್ಲಿನಟ್ಟಕಲ್ಲುಪಡುವಲು
ಕೋಡಿಸೀಮೆ ||
66 ಪ್ರಿಯದಿಂಧರ್ಮಮನೆಯ್ದೆಕಾಪಪುರುಷಗ್ಗಾರ್ಯುಂ . . . .
67 ಂಗಳೊಳ್‌ವಾರಣಾಸಿಯೊಳೆಕ್ಕೋಟಿಮುನೀಂದ್ರರಂಕವಿಲೆಯ . . . .
68 ಪೊದ್ದುಗುಮೆಂದುಸಾಱಿದಪುದೀಶ್ಶೈಳಾಕ್ಷರಂಧಾತ್ರಿಯೊಳ್ . . . .

(ಮುಂದೆ ಹೋಗಿದೆ)

13

ಅದೇ ಹೋಬಳಿ ರಾಮೇನಹಳ್ಳಿ ಗ್ರಾಮಕ್ಕೆ ಈಶಾನ್ಯದ ರಾಮೇಶ್ವರ ದೇವಾಲಯದ ಪೂರ್ವಕಡೆ ಹೊರಭಿತ್ತಿಯ ಬಳಿ ನೆಟ್ಟ ಕಲ್ಲು.

ಪ್ರಮಾಣ 4′ 6″ × 2′.

(ರಾಮದೇವನೆಂಬಾತನುಸಕವರುಷ ೧೧೩೫ ನೆಯಅಂಗೀರಸಸಂವತ್ಸ
ದಫಾಲ್ಗುಣಶು ೧ ವಡ್ಡವಾರದಂದುಶ್ರೀರಾಮನಾಥದೇವರಪ್ರತಿಷ್ಠೆಯುಮಾ
ಡಿಸಿದೇವರನಿತ್ಯನೈವೇದ್ಯನಂದಾದೀವಿಗೆ[ಗೆ]ರಾಮುಸಮುದ್ರವೆಂಬಕೆ
ರೆಕಟ್ಟಿಸಿಆಕೆರೆಯಮೊದಲೇರಿಯಲ್ಲಿ ೧೦ ಸಲೆಗೆಗದ್ದೆಬಿಟ್ಟಲು
ಕೊಟ್ಟನೆಂದುಕಾಣುತ್ತೆ)

(ಮುಂದೆ ಕಾಣುವದಿಲ್ಲ)

14

ಅದೇ ದೇವಾಲಯದ ನವರಂಗಮಂಟಪದ ಮಧ್ಯ ಅಂಕಣದ ಪಶ್ಚಿಮ ತೊಲೆಯಲ್ಲಿ.

[1]ಸ್ವಸ್ತಿಶ್ರೀಸಕವರಿಶ ೧೧೩೫ ನೆಯಅಂಗಿರಸಂವತ್ಸರದಫಾಲ್ಗುಣಶು ೧ ವಡ್ಡವಾರದಂದುಕೊಂಗನಾಡ ಶ್ರೀಕರಣದಹೆಗ್ಗಡೆರಾಮಯ್ಯನುರಾಮಸಮುದ್ರವೆಂಬಕೆ
[2]ಱೆಯಕಟ್ಟಿಸಿರಾಮಪುರವೆಂಬಪೂರಮಾಡಿಶ್ರೀರಾಮನಾಥದೇವರಪ್ರತಿಷ್ಠೆಯಂಮಾಡಿದನುಯಿಾಧರ್ಮ್ಮ ಕ್ಕೆಚಂದ್ರಾರ್ಕ್ಕತಾರಂಬರಂಸುಸ್ಥಿರವಾಗಿಕ್ಕೆಮಂಗಳಂ

15

ಅದೇ ಸ್ಥಳದಲ್ಲಿ ದಕ್ಷಿಣ ಅಂಕಣದ ಪೂರ್ವ ತೊಲೆಯಲ್ಲಿ.

[1] . . . ದಗ್ನಿರಾಮನಲೀಲೆಯನಾಂತುದಾತ್ತಗುಣಗೌರವದೊಳುರಘುವಂಶರಾಮನವೋಲೆಪೊದಳ್ದ ರಂಜಿ
[2]ತಕೊಂಡರಾಜ್ಯಕರಣಾಗ್ರಣಿಯಂವಿಭುಮಂತ್ರಿರಾಮನಂ || ಶ್ರೀರಾಮನಾಥದೇವಶರಣಂ

16

ಅದೇ ಸ್ಥಳದಲ್ಲಿ ಉತ್ತರ ಅಂಕಣದ ತೊಲೆಯಲ್ಲಿ.

[1] . . ಮಧೇನುಸಾಕ್ಷರಿಕಸುರದ್ರುಮಂಸುಕವಿಬಾಂಧವನಿಷ್ಟವಿಶಿಷ್ಟಸಜ್ಜನಾಭರಣ
[2]ಪಂಕಜಭ್ರುಮರನೆಂಬುದುಧಾರಿಣಿರಾಮದೇವನಂ || ಹರಿಹರಾಯ

17

ಅದೇ ದೇವಸ್ಥಾನದ ಬಾಗಲ ಬಳಿ ಉತ್ತರ ಭಿತ್ತಿಯ ಕಲ್ಲಿನಲ್ಲಿ.

ಪ್ರಮಾಣ 2′ 6 × 1′ 3″.

[1]ಸ್ವಸ್ತಿಶ್ರೀಜಯಾಭ್ಯು
[2]ದಯಶಾಲಿವಾಹನ
[3]ಶಕವರುಷ ೧೬೪೧ ನೆ
[4]ಯವಿಕಾರಿಸಂವತ್ಸರದ
[5]ಚೈತ್ರಶು ೮ ಮಂಗಳವಾರ
[6]ಅರ್ಕಲಗೂಡಸ್ಥಳದ
[7]ಶ್ಯಾನಭಾಗತಿಮ್ಮಪ್ಪ
[8]ಹೆಬ್ಬಾರ್ರತಂಮಸುಬ್ಬೈ
[9]ಯನವರಮಗವೆಂಕ
[10]ಟೇಶೈನುರಾಮೇಶ್ವರಸ್ವಾ
[11]ಮಿಯವರದೇವಸ್ಥಾನಾ
[12] . . ಹೋಗಿರಲಾಗಿ . .
[13]ಜೀರ್ಣಉದ್ಧಾರವಮಾಡಿ
[14]ದನೂ || ಯಿಾಧರ್ಮವ
[15]ಆಚಂದ್ರಾರ್ಕಸ್ಥಾಯಿ
[16]ಯಾಗಿಮಾಡಿದನು
[17]ಶ್ರೀ ಶ್ರೀ ಶ್ರೀ

18

ಅದೇ ಹೋಬಳಿ ಬೈಚನಹಳ್ಳಿ ಗ್ರಾಮಕ್ಕೆ ದಕ್ಷಿಣ ಆಂಜನೇಯ ದೇವಾಲಯದ ಮುಂದೆ ಬಿದ್ದಿರುವ ಕಲ್ಲು.

ಪ್ರಮಾಣ 2′ 6″ × 2′.

1 ಸ್ವಭಾನುಸಂವತ್ಸರದ . .
2 ವಯಿಶಾಕಸು ೧ ಉಶ್ರೀ
3 ಮತು . ಕದರಪನಾಯ್ಕ
4 ಕಾರ್ಯಕೆಕರ್ತರಾದಸೋಮಂನನಾ
5 . . . . ಮಾನ್ಯ

19

ಅದೇ ಹೋಬಳಿ ಬೋಳಕ್ಯಾತನ ಹಳ್ಳಿ ಗ್ರಾಮಕ್ಕೆ ಉತ್ತರ ಹೇಮಾವತೀ ಹೊಳೆಯಲ್ಲಿ ಹುಟ್ಟು ಗುಂಡಿನ ಮೇಲೆ.

1 ಮೇಲುಗೋಟೆಯಮಣಿಕಮಾ
2 ಳಿಮಸಾನಯಲಿ . ನಮುಕ
3 . ತ್ಯಯ . . . . .
4 ಅರಕಲಗೋ . . . .
5 ಶ್ರೀ . . . . ಚೆಗದಮುಗಪಚಮೆ
6 . . . . ಯಗೋಪ
7 . . . .

20

ಅದೇ ಗುಂಡಿಗೆ ದಕ್ಷಿಣದಲ್ಲಿರುವ ಮತ್ತೊಂದು ಕಲ್ಲಿನಲ್ಲಿ.

1 ಹೆಬಾಲೆಗೆ
2 ಪ್ರಭವಸಂವಥರದ
3 ಕಾರ್ತಿಕಮಾಸದಲ್ಲಿಸೂರ್ಯಗ್ರಹ
4 . . . ಮಂಗಳಮಹಾಶ್ರೀಶ್ರೀ
5 ಹೆಬಾಲೆಯೂರಹೆಬಾಲಿಯ
6 ಲಕ್ಷ್ಮಿನಾಥದೇವ
7 . . . .

21

ಅದೇ ಹೋಬಳಿ ಹೆಬ್ಬಾಲೆ ಗ್ರಾಮದ ಉರಬಾಗಲು ಬಳಿ ಉಪ್ಪರಿಗೆ ಬಸವನ ಕೆಳಗೆ ಇರುವ ಕಲ್ಲುಕಂಭದಲ್ಲಿ.

ಪೂರ್ವಕಡೆ.

1 ಶ್ರೀಬಹುಧಾನ್ಯಸಂವತ್ಸರದಮಾ
2 ಘಬ ೧೪ ಮಂ ಶ್ರೀವಾರಣಾಸಿಯ
3 ವಿಶ್ವೇಶ್ವರದೇವರಅಮೃತಪಡಿ
4 ವೊಳಗಾದಧರ್ಮ್ಮಕೆಶ್ರೀಮತ್ಪ್ರ
5 ತಾಪಚಕ್ರವರ್ತ್ತಿಹೊಯ್ಸಳ
6 ಶ್ರೀವೀರನಾರಸಿಂಹದೇವರಸರು
7 ಕೊಂಗನಾಡೊಳಗಣಹೆಬ್ಬಾಲೆ
8 ಯನುಕುತ್ತುವಿತ್ತಿಯಾಗಿಧಾ
9 ರೆಯನೆಱೆದಸ್ಥಳದಲಿನಾಡಧಿಕಾ
10 ರಿಗಳುಮುಂತಾಗಿಆರುಬಿಟ್ಟೆಬಿ
11 ಡಾರವೆಂದುಹೊಕ್ಕಡೆಹುಶಿ
12 ದಂಕೆಡಹುಳುದು || ಶ್ರೀ ||

ಉತ್ತರಕಡೆ.

13 ಆವೂರಮಂಗಳವಾರಸಂಥೆ
14 ಯಲುಸುಂಕಸೊದಿಗೆಆಯಾ
15 ದಾಯತಲೆವಿಡಿತೊಡುವಿಡಿಬಿ
16 ಲಕುಡಿವಿದುಆರುಆವವೂ
17 ಳಿಗವಮಾಡಿದರಾದಡೆಚಕ್ರವರ್ತ್ತಿ
18 ಶ್ರೀವೀರನಾರಸಿಂಹದೇವರಸರಾ
19 ಣೆಯಿದಮಿಾಱಿಆರೇನಮಾಡಿದ
20 ಡಂಹೊಯಿದುಕೆಡಹಿಕಳವ
21 ದುಆವವೂಳಿಗವಾದಡಕಳೆವ

22

ಅದೇ ಗ್ರಾಮದ ಕಾಳಪ್ಪನ ವಶದಲ್ಲಿದ್ದ ತಾಮ್ರಶಾಸನ.

೫ ಪತ್ರಗಳು.

೧ನೇ ಪತ್ರದ ಹಿಂಭಾಗ.

1 ಶುಭಮಸ್ತುನಮಸ್ತುಂಗಶಿರಶ್ಚುಂಬಿಚಂದ್ರಚಾ
2 ಮರಚಾರವೇತ್ರೈಲೋಕ್ಯನಗರಾರಂಭಮೂಲಸ್ತಂಭಾಯ
3 ಶಂಭವೇ || ಹರೇರ್ಲ್ಲೀಲಾವರಾಹಸ್ಯದಂಷ್ಟ್ರಾದಂಡಸ್ಸಪಾತುನಃ
4 ಹೇಮಾದ್ರಿಕಲಶಾಯತ್ರಧಾತ್ರೀಛತ್ರಶ್ರಿಯಂದಧೌ | ಕಾ
5 ಶ್ಯಪಾನ್ವಯಜರಾಮದಾಸತೋಹ್ಯೇಕಚಿದ್ರದಿಕು
6 ಲೇಜನಿಕ್ಷಿತೌ | ಶ್ರೀಗಿರೀಶಯಿತಿಭೂಮಿಪಸ್ತತೋಯತ್ರ
7 ಭೂಭೃದಥತಿಂಮಭೂಪತಿಃ | ತಸ್ಯಾತ್ಮಜೋಬಯ್ಯ
8 ನೃಪಕ್ಷಿತೀಂದ್ರಃಸತ್ಕೀರ್ತಿಸಾಂದ್ರಃಶ್ರಿತವಾರ್ಧಿಚ
9 ಂದ್ರಃ | ನಿಜಪ್ರತಾಪೋಷ್ಣಕರಪ್ರಕಾಶತಿರೋಹಿತಾರಾತಿಯ
10 ಶಃಶಶಾಂಕಃ | ತಸ್ಯಾತ್ಮಜಃಕೃಷ್ಣಪಭೂಪವರ್ಯಃಪ್ರತ್ಯರ್ಥಿಪ್ರಿ
11 ಥ್ವೀಶತಮಿಸ್ರಸೂರ್ಯ್ಯಃ | ನಿಸ್ಸೀಮವಿಖ್ಯಾತನಗೇಂದ್ರಧೈರ್ಯ್ಯಃಸ
12 ದಾಕೃತಾಶೇಷಹಿತಾರ್ಥಕಾರ್ಯ್ಯಃ | ತಸ್ಯಾತ್ಮಜೋವೇಂಕಟ ·
13 ಭೂಮಿಪಾಲೋಬಭೂವಲೋಕತ್ರಯಗೀತಕೀರ್ತ್ತಿಃ | ನಿರಂ
14 ತರಾನಮ್ರನರೇಂದ್ರಮೌಳಿಮಾಣಿಕ್ಯನೀರಾಜಿತಪಾದಪೀ
15 ಠಃ | ಸತೀವ್ರತಾನಾಂಪ್ರಥಮಾವಲಂಬಾನಿಜೈರ್ಗ್ಗುಣೈರ್ಲ್ಲ
16 ಬ್ಧಯಶಃಕದಂಬಾ | ಮುಖಶ್ರಿಯಾನಿರ್ಜಿತಚಂದ್ರ
17 ಬಿಂಬಾಯದ್ಧರ್ಮಪತ್ನೀವರಪದ್ಮಮಾಂಬಾ | ಶ್ರೀವೇಂಕಟೇಂ
18 ದ್ರಕ್ಷಿತಿಪಾಲಮೌಳೇಃಪದ್ಮಾಂಬಿಕಾಯಾಂಪ್ರಥಿತೋಗು
19 ಣಾಢ್ಯೈಃ | ಚಂದ್ರೋಯಥಾಕ್ಷೀರಪಯೋಧಿಗರ್ಭಾತ್ತಥಾವಿ
20 ರಾಸೀದ್ವರಲಕ್ಷ್ಮಭೂಪಃ | ರಾಮೋಯಥಾಕೋಸಲರಾಜಪುತ್ರ್ಯಾ
21 ಂವಿಷ್ಣುರ್ಯ್ಯಥಾಕಶ್ಯಪಧರ್ಮಪತ್ನ್ಯಾಂ | ಕೃಷ್ಣೋಯಥಾ

೨ನೇ ಪತ್ರದ ಮುಂಭಾಗ.

22 ದೇವಕನಂದನಾಯಾಂಪದ್ಮಾಂಬಿಕಾಯಾಂವರಲ
23 ಕ್ಷ್ಮಭೂಪಃ | ಯಃಕಾಶ್ಯಾಂನಿರಮಾಪಯತ್ಪಶುಪತೇಃ
24 ಪ್ರಾಸಾದಮಭ್ರಂಕಷಂಯೇನೈವಕ್ರತವೋಕ್ರಿಯಂತವಿ[ವಿ]
25 ಧಾಸ್ತೇವಾಜಪೇಯಾದಯಃ | ಪುತ್ರತ್ವಂಗರುಡಧ್ವಜಃಸಭ

26 ಗವಾನ್ಯಸ್ಯಾನಘಸ್ಯಾಗ್ರಗವುತ್ತಂಲಕ್ಷ್ಮ ಕ್ಷಿತಿಪಾಲಶೇಖರಮ
27 ಣಿಂಕಃಸ್ತೋತುಮಿಹಾಷ್ಟೇಭುವಿ | ಪದ್ಮೇಕ್ಷಣಸ್ಯಾಬ್ಧಿಸುತೇವ
28 ರಾಜಮೌಳೇರಪರ್ಣೇವಶಚೀವಜಿಷ್ಣೋಃ | ಚೆಂನ್ನಾಂಬಿಕಾ
29 ಲಕ್ಷ್ಮನೃಪಸ್ಯತಸ್ಯಮಣೀಃಸತೀನಾಂಹ್ರಿದಯಂಗಮಾ
30 ಸೀತ್ | ಶ್ರೀಲಕ್ಷ್ಮಭೂಮಿಪಾಕಮಿತುರ್ಮಹಿಷ್ಯಾಂಚೆಂನ್ನಾಂ
31 ಬಿಕಾನಾಮ್ನಿಮಣೌಸತೀನಾಂ | ಸುಧಾಂಬುರಾಶೇರಿವಶೀ
32 ತಭಾನುರಥಾವಿರಾಸೀನ್ನರಸಕ್ಷಿತೀಶಃ | ಚೆಂನಾಂಬಾಯಾ
33 ಂಜನಿಮುಪಗತಃಪುಷ್ಪಚಾಪೋಪಮಾಂಗಃಸೌಮ್ಯಸ್ತ್ರಾ
34 ತಾಖಿಲಬುಧಜನಃಸ್ವೈಷದೇವೋನೃಸಿಂಹಃ | ಸ್ತಂಭೋತ್ಪತ್ತಿಂ
35 ವಿಕೃತಿಮಧಿಕಾಮುಗ್ರತಾಂಚೈಕರಕ್ಷೋರಕ್ಷಾಂವಿಸ್ಮಾರಯ
36 ತಿಹಿಚಿರಾದದ್ಯಪೂರ್ವಾಮಿಹಸ್ವಾಂ | ಸೌಂದರ್ಯಂಪುದನ
37 ಸ್ಯಧರ್ಮಜನುಷಃಸತ್ಯಂಸುಭದ್ರಾಪತೇಃಶೌರ್ಯ್ಯಂಭಕ್ತಿಮಚಂ
38 ಚಲಾಂಹರಿಪದಾಂಭೋಜೇಂಬರೀಷಸ್ಯಚ | ದಾನಂಭಾನುಸುತಸ್ಯ
39 ನಿರ್ಜರಗುರೋರ್ವಾಕ್ಚಾತುರೀಸಂಗತಿಂಪುಂಸ್ಯೇಕತ್ರಲಭೇತಚೇ
40 ನ್ನರಸಭೂಪಾಲೇನತಸ್ಯೋಪಮಾ | ಸೌವರ್ಣ್ಣಕಂಚುಕದರಾದಿ
41 ಕಿರೀಟರತ್ನಹಾರಾವಳೀಕಟಕಸತ್ಪದಕಾದಿಕಾನಿ | ಯೇನಾರ್ಪಿ
42 ತಾನ್ಯಗಣಿತಾನಿಜನಾರ್ದನಾಯದೇವ್ಯೈಶ್ರಿಯೇನೃಹರಯೇಚವಿಭೂ

೨ನೇ ಪತ್ರದ ಹಿಂಭಾಗ.

43 ಷಣಾನಿ | ವಿಪ್ರಾನ್ಸಹಸ್ರಮನಿವಾರಿತಸತ್ರದತ್ತಮ್ರಿಷ್ಟಾ
44 ನ್ನಪುಷ್ಟವಪುಷ್ಟಸ್ತನುತೇನ್ವಹಂಯಃ | ಗೋಭೂಹಿರಂ
45 ಣ್ಯಕಪಿಲಾಶ್ವಮುಖಾನಿನಿತ್ಯದೇಯಾನಿಯಸ್ಯನರಸಿಂ
46 ಹನೃಪಸ್ಸಭಾತಿ | ಸರ್ವೋತ್ಕರ್ಷನಿಧಿರ್ಭೀರಿಮುಪದಂಸಜ್ಜೀ
47 ವನೋದಾತೃತಾವಾಸೋಯಂನರಸಕ್ಷಿತಿಶತಿ
48 ಲಕಃಕ್ಷೀರಾಬ್ಧಿನಾವಿಷ್ಣವೇಲಕ್ಷ್ಮೀಂದತ್ತವತಾವಿಗ್ರ
49 ಹ್ಯದವಿವಾನಾಮುಕ್ತಮಾಲ್ಯಪ್ರದಾಂದೇವೀಂಸಾ
50 ಭರಣಾಂವಿವಾಹವಿಧಿನಾಭೂಮ್ನೇನೃಸಿಂಹಾತ್ಮ
51 ನೇ | ಅಗ್ರ್ಯಂಸದ್ಮವಿರಚ್ಯತತ್ರವಿಧಿನೈವಾಮುಕ್ತಮಾಲ್ಯಪ್ರ
52 ದಾಯೇನಾಸ್ಥಾಪಿಸುದರ್ಶನಸ್ಯಕುರುತೇಯೋಭೂಸು
53 ರಾನ್ಯಜ್ವನಃ | ಯೆನ್ನಾಮ್ನಾನರಸಾಂಬುಧಿಂಚ
54 ನಿರವಾತ್ಪದ್ಮಾಕರಂಯೋಖನೀನ್ನಾಮ್ನಾಚಂ
55 ದ್ರಸರೋನೃಸಿಂಹನೃಪತಿಃಸೋಯಂವಿಜೇಜೇ
56 ಯತೇ | ನೃಸಿಂಹಭೂಭುಜಾತೇನಭೂಸುರೇಭ್ಯೋಮನಸ್ವಿನಾ |
57 ಪ್ರದತ್ತಸ್ಯಾಗ್ರಹಾರಸ್ಯಲಿಖ್ಯತೇತಾಂಬ್ರಶಾಸನಂ | ಸ್ವಸ್ತಿ
58 ಶ್ರೀವಿಜಯಾಭ್ಯುದಯಶಾಲಿವಾಹನಶಕವರ್ಷಂಗ
59 ಳು ೧೫೪೭ ನೇವರ್ತಮಾನವಿಶ್ವಾವಸುಸಂವತ್ಸರದ
60 ...ಘಶುದ್ಧಪ್ರಥಮಏಕಾದಶಿದ್ವಾದಶಿಯಲ್ಲುಶ್ರೀಮ
61 ತ್ಕಾಶ್ಯಪಗೋತ್ರದಬಯ್ಯಪ್ಪನಾಯಕರಕೃಷ್ಣಪ್ಪನಾಯಕರವರ

62 ಪ್ರಪೌತ್ರರಾದವೆಂಕಟಾದ್ರಿನಾಯಕರವರಪೌತ್ರರಾದಲ
63 ಕ್ಷ್ಮಪ್ಪನಾಯಕರ್ಯೆಯ್ಯನವರಪುತ್ರರಾದನುಣಿನಾಗಪುರವರಾಧೀಶ್ವರಸಿಂಧುಗೋವಿಂ

೩ನೇ ಪತ್ರದ ಮುಂಭಾಗ.

64 ದಧವಳಾಂಕಭೀಮಹಿಮುಕರಗಂಡಬಲಿದಸಪ್ತಾಂ
65 ಗಹರಣಸಂಗ್ರಾಮಧನಂಜಯಸಾಹಸವಿಕ್ರಮಾರ್ಕ
66 ದಾನರಾಧೇಯೇತ್ಯಾದಿಬಿರುದರಾಜಿವಿರಾಜಮಾನ
67 ರಾದಅನವರತಸತ್ರಸಂತೋಷಿತಸಕಲಸುರಭೂ
68 ಸುರವೃಂದರಾದಸಕಲಧರ್ಮ್ಮಪ್ರತಿಪಾಲಕರಾದದೇವ
69 ಬ್ರಾಹ್ಮಣಪ್ರತಿಪಾಲನಧುರಂಧರರಾದನಾರಸಿಂಹ
70 ನಾಯಕರ್ಯೆಯನವರೂ । ಅತ್ರೇಯಗೋತ್ರದಆಪಸ್ತಂ
71 ಬಸೂತ್ರದಯಜುಶಾಖೆಯಗೋಪಣಹೆಬಾರ್ರಪ್ರಪೌತ್ರ
72 ರಾದಚಂನೆಹೆಬಾರ್ರಪೌತ್ರರಾದಗಿರಿಹೆಬಾರ್ರಪುತ್ರರಾದ
73 ಲಿಂಗಣಹೆಬಾರ್ರಜ ೧ ಭಾರ್ಗವಗೋತ್ರದಆಶ್ವಲಾಯ
74 ನಸೂತ್ರದರುಕ್ಕುಶಾಖೆಯಮುಕ್ಕಂಭಟ್ಟರಪ್ರಪೌತ್ರರಾ
75 ದಅಂಣಭಟ್ಟರಪೌತ್ರರಾದವೈಕುಂಟಭಟ್ಟರಪುತ್ರ
76 ರಾದನಾರಣಬಟರಜ ೧ ಆತ್ರೇಯಗೋತ್ರದಆಪಸ್ತಂ
77 ಭಸೂತ್ರದಯಜುಃಶಾಖೆಯಜಂನೆಹೆಬಾರಪ್ರಪೌತ್ರ
78 ರಾದಗಿರಿಹೆಬಾರಪೌತ್ರರಾದಅಪ್ಪಹೆಬಾರಪುತ್ರರಾ
79 ದತಿರುಮಲಗಿರಿಹೆಬಾರ್ರಜ ೧ ಕೌಶಿಕಗೋತ್ರದಆಶ್ವಲಾಯ
80 ನಸೂತ್ರದರುಕ್‌ಶಾಖೆಯನಾರಸಿಂಹ್ಮವಾರ
81 ಣಾಸಿಗಳಪ್ರಪೌತ್ರರಾದದೇವಪ್ಪಬಟ್ಟರಪೌತ್ರರಾ
82 ದಸುಬ್ರಹ್ಮಣ್ಯಭಟ್ಟರಪುತ್ರರಾದಅನ್ನದಾನಿ
83 ಗಳಜ ೧ ಶ್ರೀವತ್ಸಗೋತ್ರದಆಪಸ್ತಂಭಸೂತ್ರದಯ
84 ಜುಃಶಾಖೆಯಸೋಮಭಟ್ಟರಪ್ರಪೌತ್ರರಾದಲಿಂಗಾ
85 ಭಟ್ಟರಪೌತ್ರರಾದಎಲ್ಲಂಬಟರಪುತ್ರರಾದ

೩ನೇ ಪತ್ರದ ಹಿಂಭಾಗ.

86 ಶೇಷಾದ್ರಿಭಟರಜ ೧ ಭಾರದ್ವಾಜಗೋತ್ರದಆ
87 ಪಸ್ತಂಭಸೂತ್ರದಯಜುಃಶಾಖೆಯಸರ್ವ
88 ಕ್ರತುನಾರಸಿಂಹ್ಮದೀಕ್ಷಿತರಪ್ರಪೌತ್ರರಾದರ
89 ಂಗನಾಥದೀಕ್ಷಿತರಪೌತ್ರರಾದಚೆಂನಿಭಟರ
90 ಪುತ್ರರಾದಜೆಂನಿಭಟರಜ ೧ ಶ್ರೀವತ್ಸಗೋತ್ರದ
91 ಆಪಸ್ತಂಭಸೂತ್ರದಯಜುಃಶಾಖೆಯಗಂ
92 ಗಾಧರಸೋಮಯಾಜಿಗಳಪ್ರಪೌತ್ರರಾದಲ
93 ಕ್ಷ್ಮಣಾಭಟರಪೌತ್ರರಾದರಂಗಭಟರಪುತ್ರ
94 ರಾದನರಸಂಭಟರಜ ೧ ವಶಿಷ್ಟಗೋತ್ರದಆಪ
95 ಸ್ತಂಬಸೂತ್ರದಯಜುಃಶಾಖೆಯದುಗ್ಗಂಭ

96 ಟ್ಟರ್ರಪ್ರಪೌತ್ರರಾದನಂಜಪ್ಪರಸರಪೌತ್ರರಾದ
97 ನಾಗಂಭಟ್ಟರಪುತ್ರರಾದಸುಬಯ್ಯಗಳಜ ೧
98 ಜಾಮದಗ್ನ್ಯಯಾವತ್ಸಗೋತ್ರದಆಪಸ್ತಂಭ
99 ಸೂತ್ರದಯಜುಃಶಾಖೆಯಶಂಕರಭಟ್ಟರ
100 ಪ್ರಪೌತ್ರರಾದಲಕ್ಷ್ಮೀಕಾಂತ್ತಭಟ್ಟರಪೌತ್ರ
101 ರಾದಸೋಮೇಶ್ವರಭಟ್ಟರಪುತ್ರರಾದನಂ
102 ಜಪ್ಪಗಳಜ ೧ ಭಾರದ್ವಾಜಗೋತ್ರದಆಶ್ವ
103 ಲಾಯನಸೂತ್ರದರುಕ್‌ಶಾಖೆಯಮಲ್ಲೇ
104 ಲಿಂಗವಾರಣಾಸಿಗಳಪ್ರಪೌತ್ರರಾದ

೪ನೇ ಪತ್ರದ ಮುಂಭಾಗ.

105 ಮಲ್ಲಿಕಾರ್ಜುನೈಯಗಳಪೌತ್ರರಾದಮಾದಪ್ಪಗಳಪುತ್ರ
106 ರಾದಭಾರತೀನಂಜಪ್ಪಗಳಜ ೧ ಶ್ರೀವತ್ಸಗೋತ್ರದಆಪಸ್ತ
107 ಂಭಸೂತ್ರದಯಜುಃಶಾಖೆಯನಾಗಂಭಟರಪ್ರಪೌತ್ರ
108 ರಾದತಿರುಮಲಭಟರಪೌತ್ರರಾದತಿರುಮಲದೀಕ್ಷಿತರಪು
109 ತ್ರರಾದವೇಂಕಟಾದ್ರಿಭಟರಜ ೧ ಕಾಶ್ಯಪಗೋತ್ರದಆಶ್ಲಾಯ
110 ನಸೂತ್ರದರುಕ್‌ಶಾಖೆಯಲಕ್ಷ್ಮಣಭಟರಪ್ರಪೌತ್ರರಾದನಾರ
111 ಣಭಟರಪೌತ್ರರಾದಶಿಂಗಂಭಟರಪುತ್ರರಾದನಾರಣ
112 ಭಟರಜ ೧ ಅಂತೂಜ ೧೨ ಇಹನ್ನೆರಡುಮಂದಿಬ್ರಾಹ್ಮರಿಗೆ
113 ಕೊಟ್ಟಸರ್ವಮಾನ್ಯಾಗ್ರಹಾರದತಾಂಮ್ರಶಾಸನದಕ್ರಮವೆಂತೆಂ
114 ದರೆನಮಗೆಪೂರ್ವದಿಂದರಾಯದತ್ತವಾಗಿಬಂದಂಥಾನರಸಿಂ
115 ಹ್ಮಪುರದಸೀಮೆಗೆಸಲುವಹೆಬ್ಬಾಲೆಯಸ್ಥಳದೊಳಗಣದೇವರಹ
116 ಳ್ಳಿಯೆಂಬಗ್ರಾಮವನ್ನೂಕಾಶ್ಯಪಗೋತ್ರದಬಯ್ಯಪ್ಪನಾ
117 ಯಕರಕೃಷ್ಣಪ್ಪನಾಯಕರವರಪ್ರಪೌತ್ರರಾದವೇಂ
118 ಕಟಾದ್ರಿನಾಯಕರವರಪೌತ್ರರಾದಲಕ್ಷ್ಮಪ್ಪನಾಯ
119 ಕರಯ್ಯನವರಪುತ್ರರಾದನಾರಸಿಂಹನಾಯಕ
120 ರಯ್ಯನವರುಹೆಬ್ಬಾಲೆಲಿಂಗಣರೆಂಬರಜ ೧ ವೈಕುಂ
121 ಠಭಟರನಾರಣಭಟರಜ ೧ ತಿರುಮಲಗಿರಿಹೆಬಾರ್ರ
122 ಜ ೧ ಅನ್ನದಾನಿಗಳಜ ೧ ಶೇಷಾದ್ರಿಭಟ್ಟರಜ ೧ ಜೆಂನಿಭಟರಜ ೧
123 ನಂಜಪ್ಪಗಳಜ ೧ ಭಾರತೀನಂಜಪ್ಪಗಳಜ ೧ ತಿರುಮಲದೀಕ್ಷಿತರ
124 ವೆಂಕಟಾದ್ರಿಭಟರಜ ೧ ಸಿಂಗಂಭಟರನಾರಣಭಟ
125 ರಜ ೧ ಅಂತ್ತುಈ ೧೨ ಹಂನ್ನೆರಡುಮಂದಿಬ್ರಾಹ್ಮ
126 ರಿಗೆನಂಮಮಾತಾಪಿತೃಗಳಾದಲಕ್ಷ್ಮಪ್ಪನಾಯಕರೈ
127 ಯ್ಯನವರುಜೆಂನ್ನಾಜಂಮ್ಮನವರುಗಂಗ್ಗಪ್ಪನಾಯ

೪ನೇ ಪತ್ರದ ಹಿಂಭಾಗ.

128 ಕರ್ರೈಯ್ಯನವರೂಕುಮಾರ್ತಿಕೊಂಡಂಮ್ಮನವರುಮುಂತ್ತಾ
129 ದಸಕಲಪಿತೃಗಳಿಗೂಶಾಶ್ವತವೈಕುಂಠಾವಾಪ್ತಿಯಾ

130 ಗಬೇಕೆಂದುನಾಉನಂಮ್ಮಪುತ್ರಮಿತ್ರಕಳತ್ರಾದಿಗ
131 ಳಿಗೂಅನೇಕಶ್ರೇಯೋಭ್ಯುದಯಗಳುಆಗಬೇಕೆಂದು
132 ಸಕಲಮನಸಾಭೀಷ್ಟಸಿದ್ಧಿಯಾಗಬೇಕೆಂದುಈಪ್ರಥಮ
133 ಏಕಾದಶೀದ್ವಾದಶೀಪುಂಣ್ಯಕಾಲದಲ್ಲಿಸಹಿರಂಣ್ಯೋ
134 ದಕದಾನಧಾರಾಪೂರ್ವಕವಾಗಿತ್ರಿಕರಣಶುದ್ಧವಾಗಿದೊ
135 ಡಗಾವನಹಳ್ಳಿಗೆಪಡುವಲಾದಸಣಬನಕುಪ್ಪೆಗೆಬಡಗಲಾ
136 ದದಡನಹಳ್ಳಿಗೆಮೂಡಲಾದಕಂಚೇನಹಳ್ಳಿಗೆತೆಂಕಲಾ
137 ದಈದೇವರಹಳ್ಳಿಎಂಬಗ್ರಾಮವಂನ್ನುನಾಉನಿಮಗೆ
138 ದಾನಧಾರಾಪೂರ್ವಕವಾಗಿಕೊಟ್ಟೆವಾದಕಾರಣಆಗ್ರಾಮ
139 ಕ್ಕೆಸಲುವಚತುಃಸೀಮೆಗೆವಳಗಾದಗದ್ದೆಬೆದ್ದಲುತೋಟ
140 ತುಡಿಕೆಅಣೆಅಚ್ಚುಕಟ್ಟುಕಾಡಾರಂಭನೀರಾರಂಭಗಳೆಂ
141 ಬಅಷ್ಟಭೋಗಂಗಳಂನುನಿಧಿನಿಕ್ಷೇಪಜಲಪಾಷಾಣಅಕ್ಷೀ
142 ಣಿಆಗಾಮಿಸಿಧಸಾಧ್ಯಂಗಳೆಂಬಅಷ್ಟತೇಜಸ್ವಾಮ್ಯಗಳಂನು
143 ಸಕಲಸುವಂರ್ನಾದಾಯದವಸಾದಾಯಹೊಗೆಕಾಣಿಕೆ
144 ಮುಂತಾದಚಿಲುವಾನಕಾಣಿಕೆಗಳುಬೇಡಿಗೆಭತ್ತವರಿಹುರಳಿ
145 ವಟಸರತಿಮುಂತ್ತಾದಸಮಸ್ತಕಾಣಿಕೆಗಳುಸಹಾನೀವೆಆಗುಮಾ
146 ಡಿಅನುಭವಿಸಿಕೊಂಡುಈಗ್ರಾಮಕ್ಕೆಸಲುವಭೂಮಿಯನ್ನುಇ
147 ದಕ್ಕೆಸಲುವಸರ್ವಸ್ವಾಮ್ಯಗಳಂನ್ನುಹಂನ್ನೆರಡೂವರೆವ್ರಿತ್ತಿಯ
148 ಬಂದುಕಟನಲ್ಲಿಪರಿಛೇದವಮಾಡಿಕೊಂಡುಈಹನ್ನೆರಡೂ
149 ವರೆವ್ರಿತ್ತಿಗಳಲ್ಲಿಜ ೧ ಕ್ಕೆ ವ್ರಿತ್ತಿ ೧ ರಬಂದುಕಟ್ಟನಲ್ಲಿಬ್ರಾಹ್ಮರ
150 ಜನಹುಂನ್ನೆರಡಕ್ಕೆವ್ರಿತ್ತಿಹಂನ್ನೆರಡುಈಗ್ರಾಮಯಜ

೫ನೇ ಪತ್ರದ ಮುಂಭಾಗ.

151 ಮಾನನಾದಲಿಂಗಣಹೆಬಾರುವಗೆಯಜಮಾನಾಂಶಕ್ಕೆಹೆ
152 ಚ್ಚುಕಾಲುವ್ರಿತ್ತಿಈಅಗ್ರಹಾರದದೇವಸ್ಥಾನಕೆಕಾಲುವ್ರಿ
153 ತ್ತಿಅಂತುಹನ್ನೆರಡೂವರೆವ್ರಿತ್ತಿಯನ್ನುಈರೀತಿಯಲ್ಲಿ
154 ಭೂಮಿಪರಿಛೇದವಮಾಡಿಕೊಂಡುನಿರುಪಾಧಿಕವಾಗಿನಿರು
155 ಪದ್ರವವಾಗಿಆಧಿಕ್ರಯದಾನಪರಿವರ್ತನಗಳಿಗೆಸಲುವ
156 ಮರ್ಯ್ಯಾದೆಯಲ್ಲಿ ನಿಮ್ಮಪುತ್ರಪೌತ್ರಪಾರಂಪರ್ಯವಾಗಿಈದೇ
157 ವರಹಳ್ಳಿಎಂಬಸರ್ವಮಾನ್ಯಾಗ್ರಹಾರವನುನೀವುಸುಖದ
158 ಲ್ಲಿಅನುಭವಿಸಿಕ್ಕೊಂಡುಇರಲುಳವರುಎಂದುಕಾಶ್ಯಪಗೋ
159 ತ್ರದಬೈಯ್ಯಪ್ಪನಾಯಕರಕೃಷ್ಣಪ್ಪನಾಯಕರವರಪ್ರಪೌತ್ರರಾ
160 ದವೇಂಕಟಾದ್ರಿನಾಯಕರವರಪೌತ್ರರಾದಲಕ್ಷ್ಮಪ್ಪನಾಯಕ
161 ರೈಯ್ಯನವರಪುತ್ರರಾದನಾರಸಿಂಹ್ಮನಾಯಕರೈಯ್ಯನವ
162 ರೂಹೆಬ್ಬಾಲೆಯಲಿಂಗಣಹೆಬಾರುವೈಕುಂಠಭಟರನಾರಣಭಟ
163 ರುತಿರುಮಲಗಿರಿಹೆಬಾರುಅನ್ನದಾನಿಗಳುಶೇಷಾದ್ರಿಭಟರುಜೋಗಿ
164 ಭಟರುನರಸಂಭಟರುಸುಬ್ಬಯಗಳುಸೋಮಯನಂಜಪ್ಪ
165 ಗಳುಭಾರತೀನಂಜಪ್ಪಗಳುವೇಂಕಟಾದ್ರಿಭಟರುಶಿಂಗಂಭಟರನಾ

166 ರಣಭಟರುಅಂತುಈಹಂನ್ನೆರಡುಮಂದಿಬ್ರಾಹ್ಮರಿಗೆಕೊಟಸರ್ವ
167 ಮಾನ್ಯಾಗ್ರಹಾರದತಾಂಮ್ರಶಾಸನ || ಪೃಥಿವ್ಯಾದೀಯಾಮಾನಾ
168 ಯಾಯಾವಂತೋಮಧ್ವರೇಣವಃ | ತಾವದ್ವರ್ಷಸಹಸ್ರಾಣಿಬ್ರಹ್ಮ
169 ಲೋಕೇಮಹೀಯತೇ | ದಾನಪಾಲನಯೋರ್ಮಧ್ಯೇದಾನಾಛ್ರೇಯೋನು
170 ಪಾಲನಂ | ದಾನಾತ್ಸ್ವರ್ಗ್ಗಮವಾಪ್ನೋತಿಪಾಲನಾದಚ್ಯುತಂಪದಂ |
171 ಸ್ವದತ್ತಾಂಪರದತ್ತಾಂವಾಯೋಹರೇತ್ತುವಸುಂಧರಾಂ | ಷಷ್ಟಿವರ್ಷಸಹ
172 ಸ್ರಾಣಿವಿಷ್ಠಾಯಾಂಜಾಯತೇಕ್ರಿಮಿಃ | ಸ್ವದತ್ತಾದ್ವಿಗುಣಂಪುಣ್ಯಂಪರದ
173 ತ್ತಾನುಪಾಲನಂ | ಪರದತ್ತಾಪಹಾರೇಣಸ್ವದತ್ತಂನಿಷ್ಫಲಂಭವೇತ್ | ನವಿಷ
174 ಂವಿಷಮಿತ್ಯಾಹುರ್ಬ್ರಂಹ್ಮಸ್ವಂವಿಷಮುಚ್ಯತೇವಿಷಮೇಕಾಕಿನಂಹಂ
175 ತಿಬ್ರಹ್ಮಸ್ವಂಸಕಲಂಕುಲಂ | ಅನ್ಯೇಷಾಂಥರ್ದಿತಂಭುಂಕ್ತೇಶ್ವಾ

೫ನೇ ಪತ್ರದ ಹಿಂಭಾಗ.

176 ನಚೈವಸ್ವಥರ್ದಿತಂ | ತತಃಕಷ್ಟತರೋನೀಚಃಸ್ವಯಂದತ್ತಾ
177 ಪಹಾರಕಃ | ಸ್ವದತ್ತಾಪುತ್ರಿಕಾಧಾತ್ರೀಪಿತ್ರುದತ್ತಾಸಹೋದರೀಪ
178 ರದತ್ತಾಸ್ವಯಂಮಾತಾದತ್ತಾಂಭೂಮಿಂಪರಿತ್ಯಜೇತ್ | ಯೇ
179 ಕೈವಭಗಿನೀಲೋಕೇಸರ್ವೇಷಾಮೇವಭೂಭುಜಾಂ | ನಭೋಜ್ಯಾ
180 ನಕರಗ್ರಾಹ್ಯಾವಿಪ್ರದತ್ತಾವಸುಂಧರಾ | ಆದಿತ್ಯಚಂದ್ರಾವ
181 ನಿಲೋನಲಶ್ಚದ್ಯಾರ್ಭೂಮಿರಾಪೋಹೃದಯಂಯಮ
182 ಶ್ಚಆಹಶ್ಚರಾತ್ರಿಶ್ಚಉಭೇಚಸಂಧ್ಯೇಧರ್ಮಶ್ಚಜಾನಾತಿ
183 ನರಸ್ಯವೃತ್ತಂ ||

ಶ್ರೀಜಯನರಸಿಂಹ

23

ಅದೇ ಹೋಬಳಿ ಮೊಡ್ಲಹಳ್ಳಿ ಊರು ಮುಂದೆ ನಟ್ಟ ಕಲ್ಲು.

1 . . . .
2 ವಳಿತಮ . . . .
3 ಚರಾಯಪಂಣ . . . .
4 ಯತುನಂಮವರ . . . .
5 ಗ್ರಾಮ ೧ ನ್ನುಲಿಂಗಮುದ್ರಿಕಾಹಾಕಿಕೊಟ್ಟೆಉನೀಉಶಿವಪೂಜೆ
6 ಜಪತಪಜಂಗಮಾರ್ಚನೆಯಮಾಡಿಕೊಂಡುಧರ್ಮವನಡಸಿ . .
7 ಖದಲಿಅನುಭವಿಸಿಕೊಂಡುಯಿಹರಿಇದಕೆಅಳುಪಿದವರು
8 ಗೋವುಬ್ರಾಂಹ್ಮಣರನೂತಂಮತಂದೆತಾಯನುವಾರಣಾ
9 ಸಿಯಲಿಕೊಂದವರುದೇವಲೋಕಮರ್ತ್ಯಲೋಕಕೆಹೊರಗುವಿಭೂತಿ
10 ರುದ್ರಾಕ್ಷೆಗೆಹೊರಗುಸ್ನಾನಮಾಂನ್ಯಪೂರ್ವಮರಿಯಾದೆ

(ಮುಂದೆ ಬರವಣಿಗೆ ಇಲ್ಲ)

24

ನಿಲವಾಗಿಲು ಹೋಬಳಿ ಮರೂರು ಗ್ರಾಮದಲ್ಲಿ ಪಟೇಲ ಬಸವಯ್ಯನ ದೇವರಾಜಯ್ಯನ ಹೊಲದಲ್ಲಿರುವ ಕಲ್ಲು.

ಪ್ರಮಾಣ 6′ 6″ × 3′.

1 . . . .
2 ಸ್ವಸ್ತಿನೀತಿಮಾರ್ಗ್ಗಕೊಂಙ್ಗುಣಿವರ್ಮ್ಮಧರ್ಮ್ಮಮಹಾರಾ
3 ಜಾಧಿರಾಜಕೋಳಾಳಪುರಪರಮೇಸ್ವರನನ್ದಗಿರಿನಾ
4 ಥಶ್ರೀಮತ್ನನ್ನಿಯಗಙ್ಗರಾಜ್ಯಂಗೆಯ್ಯುತ್ತಿರೆತ
5 ದ್ವರಿಷಆಭ್ಯನ್ತರಸೂರ್ಯ್ಯಗ್ರಹಣಅಮವಾ
6 ಸೆಆದಿತ್ಯವಾರಂವ್ಯತೀಪಾತಸ್ತಿತಿಯಾಗೆಶ್ರೀಮತ್
7 ತದ್ದಯ್ಯಮಾಖಣ್ಡಭಟಾರಗ್ಗೆವಿದ್ಯಾದಾನಗೊಟ್ಟಮಣ್ಣಾ
8 ಬಟ್ಟವಾಳಯ್ಗನ್ಡಗಂಆಲ್ಲೆಭಾಗೆನ್ನೆಲ್ವಮೇವುದುಮು
9 ದಣಪೆಮ್ಬಯಕಲ್ಲತೆಂಕಣಾತಮರೆಪಡುವಣಪಟ್ಟ್ವಿ
10 ವರೆಬಡಗಣನರಗವದುಬಯುಲೊಳ್ಕೂಡಿತ್ತು
11 ಅರೆಕೆಱೆಯಮೂಡಣಿಕಡೆಗೋಡಿನನೀರ್ಮಣ್ಣುಮ
12 ಣ್ಡಂಗಳಯ್ಗುಳಮದಱಸೀಮೆಮೂಡಣಬಾಯ್ಕ . .
13 ತೆಙ್ಕಣತೆವರುಪಡುವಪಳಮೇರೆಬಡಗಂಪೆಬ್ಬೆಯುಂ . .
14 ಪೆದವರುಬಯುಲ್ಲ . ಜತ್ತುಕೊಸಿಗಗೆಱೆಯುಬಡಗಣ
15 ಕಡೆಗೋಡತೋಣ್ಟಇನಿತುಮಣ್ಣಬಿಡಸಿದಪ್ರಭುಗಳಂಕನಾಮ
16 ಬೂವಗಾವುಣ್ಡಪಡಿಲಯ್ಯಪದುದೆಯ್ಯತಯ . .
17 ನಈಮಣ್ಣಂಆವಗೊಣ್ಡೋನುಅಱಿದೋನುಂಸಾಯಿರಕವಿಲೆಯ

(ಮುಂದೆ ಬರವಣಿಗೆ ಇಲ್ಲ)

25

ಅದೇ ಗ್ರಾಮದ ಊರು ಬಾಗಿಲಿನ ಉತ್ತರಕ್ಕೆ ಬಿದ್ದಿರುವ ವೀರಕಲ್ಲು.

ಪ್ರಮಾಣ 3 × 5.

1 ಕಗ್ಗಡನೆನಾ . . . .
2 ನಾಡಸಂಗ್ರಾಮದೊಳು . .
3 ರದತ್ತಂಪಾಯೋ . . .
4 ಸುಂಧರಾಂಷಷ್ಟಿ . . .
5 ಹಶ್ರಾಣಿವಿ . . . .
6 ಯತ್ತೀಕ್ರಿಮಿಃ . . . . .
7 ಕಲ್ಲಂನಿಱಿಸಿದದೇವಯ್ಯ .
8 ಪೆರ್ಮ್ಮಡಿ . . . . .
9 ಬಯ್ಯ . . . .

26

ಅದೇ ಊರು ಬಾಗಿಲಿನ ದಕ್ಷಿಣದಲ್ಲಿರುವ ವೀರಕಲ್ಲು.

ಪ್ರಮಾಣ 7′ × 5′.

1 ಸ್ವಸ್ತಿಸತ್ಯವಾಕ್ಯಪೆರ್ಮ್ಮಾನಡಿಗಳಪತ್ತೊಮ್ಬತ್ತನೆ
2 ಯವರಿಸದೊಳ್ನೀತಿಮಾರ್ಗ್ಗ ಕೊಙ್ಗಣಿಧರ್ಮ್ಮಮಾಹಾರಾಜಾಧಿ
3 ರಾಜಕೊವಳಾಲಪುರವರೇಸ್ವರನನ್ದಗಿರಿನಾತಕೊಗರಾ
4 ವೆಡೆವಿಜಯದಙ್ಕಕಾರಿಲೋಕಸಿಖಾಮಣಿ
5 ಶ್ರೀಮು
6 ಎಱಿ
7 ಯಪ್ಪ
8 ರಸರ
9 ಕಲವು
10 ರಕಾಲ
11 ದಿದಾ . ಕಣಬಿಸದಿಗಣಗುಂದಿತವೂಣಿಸಮಾ
12 . ರಾಜ್ಯ . ರಸರಾಪಿತಶಿವಯ್ಯಾತಂತಮ್ಮಾ
13 ತದ್ದಯ್ಯನೂ ಸೇನೆಕಾದಿಸತ್ತೊಡೆಅವರಮುಕ್ಕಳ್
14 ಕಲ್ನಾಟ್ಟುಗೊ
15 ಟ್ಟರ್ಇದನ
16 ಱಿದೊಡೆ
17 ವಾರಣಾ
18 ಸಿಯ . .
19 ರಾ . . .
20 ರಕವಿ
21 ಲೆಯುಸಾಸಿರ್ವ್ವಪಾರ್ವ್ವರಕೊನ್ದಪಾಪಸಾರ್ಗ್ಗು

27

ಅದೇ ಊರು ಬಾಗಿಲಿನ ಉತ್ತರಕ್ಕೆ ಇರುವ ವೀರಕಲ್ಲು.

ಪ್ರಮಾಣ 5′ × 3′ 9″.

1 ಸ್ವಸ್ತಿಸತ್ಯವಾಕ್ಯಕೊಙ್ಗಣಿವ
2 ರ್ಮ್ಮಧರ್ಮ್ಮಮಹಾರಾಜಾಧಿರಾಜಕುವ
3 ಳಾಲಪುರವರೇಸ್ವರನನ್ದಗಿರಿ[ನಾ]ತಶ್ರೀ
4 ಮತ್ಪೆರ್ಮನಡಿಗಳ . . . . .
5 ಣ್ನಬೂರಅಭ್ಯನ್ತ್ರಸಿದ್ಧಿಕೊರಳ್ವಿಕುಲ
6 ಪುಗಟ್ಟಿ
7 ನೀತಿಮಾರ್ಗ್ಗ
8 ಪೆರ್ಮ್ಮನಡಿ .
9 ಗಳ್ಸ್ವರ್ಗ್ಗ
10 ಮೇಱಿದನ್ದುಮ
11 ಱಿವೂರ
12 ಬಬಿಯ
13 ಮ್ಮಂಕೆಚ್ಚುವಿ
14 ಕಂಚಮ್ಮಟ
15 ಂಬರದೊಂ
16 ಮಙ್ಗಳಂ

28

ಅದೇ ಗ್ರಾಮದಲ್ಲಿ ಬಸವೇಶ್ವರ ಗುಡಿಯ ಹತ್ತರ ಇರುವ ವೀರಕಲ್ಲು.

ಪ್ರಮಾಣ 2′ 6″ × 2′ 6″.

1 ಸ್ವಸ್ತಿಶ್ರೀ . . ಸಕವ . . . .
2 ಜಯಸಂವತ್ಸರಂವತ್ತಿ೯ಸುತಿರೆ . . . . . .
3 . . . . ಅಮವಾಸೆಸೋಮವಾರದಂದು .
4 ಗೆಡವಗೆಯಂಪಟ್ಟಗಸ್ಥ ಪುಷ್ಪ ಮಂಪಡೆದ
5 ಎಡುವಮಾಡಿದವರಂಕೊಡುಮು . . ಗೆವಂ . . ಕು
6 ಊರಳವಿನಗ . . . . ಗಳಮುಟಿ

(ಮುಂದೆ ಕಾಣುವದಿಲ್ಲ)

29

ಅದೇ ಗ್ರಾಮದ ಅರ್ಕೇಶ್ವರ ದೇವಸ್ಥಾನಕ್ಕೆ ಉತ್ತರದಲ್ಲಿ ನೆಟ್ಟ ಕಲ್ಲು.

ಪ್ರಮಾಣ 5′ × 2′.

1 ಶ್ರೀನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇತ್ರೈಲೋಕ್ಯ
2 ನಗರಾರಂಭಮೂಲಸ್ತಂಭಾಯಶಂಭವೇಸ್ವಸ್ತಿಸ
. . . .
6 ರಾ . . . ಡತೆಯ . . . . ಡಿನಲುಸುಖಸಂಕಥಾವಿ
7 ನೋದದಿಂರಾಜ್ಯಂಗೆಯುತಿರಲುವಿಕ್ರಮಸಂವತ್ಸರದ . .
9 . ಸುಧಪಂಚಮಿ . . . .
. . . .
11 . . ಪಂಡಿತ . . . . ಕ್ಷಿಕಪಂಡಿತ
12 . . . . . . ನಾಡ . . ಯಿಕ್ಕಳ
. . . .
17 ಕೀಲ . . ದಸುದದಸಮಿಸುಕ್ರವಾರದಂದುಯನ
18 . . ಮರಊರ . . ಶ್ರಿಯರಕೇಸ್ವರದೇವರಿಗೆ

(ಮುಂದೆ ಬರವಣಿಗೆ ಇಲ್ಲ)

30

ಅದೇ ಹೋಬಳಿ ದೊಡ್ಡ ಬೊಮ್ಮನಹಳ್ಳಿ ಗ್ರಾಮಕ್ಕೆ ದಕ್ಷಿಣ ಊರಬಾಗಲ ಬಳಿ ಬಸವನಗುಡಿಯ ಮುಂದೆ ನೆಟ್ಟ ಕಲ್ಲು.

ಪ್ರಮಾಣ 3′ × 2′ 6″.

1 ದುರ್ಮುಕಿಸಂವತ್ಸರದಜೇಷ್ಠಸುಧ ೧ ಲು
2 ಶ್ರೀಮತುಭಹದರಾಜನವರು ||
3 ಶ್ರೀರಾಮೆಯಲಿಂಗಗೆಕೊಟ್ಟಪುರ

31

ಅದೇ ಹೋಬಳಿ ಚಿಕ್ಕ ಬೊಮ್ಮನಹಳ್ಳಿ ಗ್ರಾಮಕ್ಕೆ ಉತ್ತರ ಸೊಪ್ಪಿನಕಟ್ಟೆಯ ಬಳಿ ಬಿದ್ದಿರುವ ಕಲ್ಲು.

ಪ್ರಮಾಣ 3′ 3″ × 2′ 3″.

[1]ಶ್ರೀಮತುದುರ್ಮತಿಸಂವತ್ಸರ
[2]ದಮಾರ್ಗಸಿರಸು ೧೦ ಲುಚಿಕ್ಕ
[3]ವೀರಂಣಾಒಡೆಯರುದೇವರಿಗೆಚಿಕ್ಕಬೊಂ
[4]ಮನಹಳ್ಳಿಯನಡುಊರೊಳಗಳಆಡದೆರೆಯನ
[5]ರಾಸಿಮಠಕ್ಕೆಪುಟ್ಟಣ್ಣಗೌಡಧರ್ಮಕ್ಕೆಕೊಟ್ಟ
[6]ಭೂಮಿಇಸೀಮೆಗೆಆಮಠಕ್ಕೆಸಮಯದೇವರಳು
[7]ಪಿದರೆಸ್ಥಾವರದವರುಅರಸುಗಳುಪ್ರಭುಗಳಳುಪಿ
[8]ದರೆವಾರಣಾಸಿಯಲಿಬ್ರಂಹ್ಮತ್ಯಗೋಹತ್ಯ
[9]ಮಾತ್ರುಪಿತ್ರುಹತ್ಯವಮಾಡಿದಪಾಪಕ್ಕೆಹೋ
[10]ಹರುಇತೋಟಕ್ಕೆಆಮಠಕ್ಕೆಅಳುಪಿದರೆ
[11]ಇಪ್ಪತ್ತೊಂದುಮಾತಾಪಿತ್ರುಗಳುನ[ರ]ಕದಲ್ಲಿಹ
[12]ರು || ಇಂನುಪ್ರಭುಪ್ರಜೆಯುಮನಸಿಗೆಬಂದುಮಠವ
[13]ನುಂಟುಮಾಡುವತಪಸಿಗಳಿಗೆಮಠತೋಟಸಲುಹುದು
[14]ಮಠವನುಂಟುಮಾಡದೆತೋಟದಲ್ಲಾದಆರ್ಜ್ಜನೆ
[15]ಯಕಟ್ಟಿಕೊಂಡುಹೋದರೆಇಂನೆರೆಯಹಳ್ಳಿಲಿದ್ದು
[16]ತೋಟಕ್ಕಾಸೆಮಾಡಿದರೆವಿಭೂತಿರುದ್ರಾಕ್ಷಿಗೆಹೊರಗು
[17]ಮಹಾಮ[ಹ]ತ್ತಿಗೆಹೊರಗು || ಮಲ್ಲೋಜನಬ
[18]ರಹ ||

32

ಅದೇ ಹೋಬಳಿ ಹಂಡ್ರಂಗಿ ಗ್ರಾಮದ ಊರಬಾಗಲಲ್ಲಿ ನೆಟ್ಟ ಕಲ್ಲು.

ಪ್ರಮಾಣ 4′ 6′ × 2′ 3″.

[1] ೧೭
[2]೪೭ ಅಕ್ಷಯಸಂವಚರದ
[3]ಬಾದ್ರಪದಬ ೧ ಲ್ಲುಕೃಷ್ಣ
[4]ರಾಜವಡೇರ್‍ರೈನೋರುಶ್ರೀ
[5]ನಂಜರಾಜಯನ . . ದು
[6]ಯ್ಯವರಲ್ಲಿನವಾಬ . ಸಹೆ
[7]ಜಮಾಲುಯಾಗೆಬರದುಬಗೆಧಾ
[8]ರ್ಮಾರ್ಥವಾಗಿಕೊಣನೂರನಾ
[9]ಡಾಹಂಡ್ರಂಗಿಗ್ರಾಮ[ವ]ಂನುದರ್ಮ
[10]ರ್ಥವಾಗಿಬಿಟ್ಟುಕೊಟ . . . .
[11] . . . .
[12]ಏದಕ್ಕೆಕಾಸಿಯಲ್ಲಿಗೋಹತ್ಯಮಾಡಿದ
[13]ವರಪಾತ[ಕ]ಕ್ಕೆಹೋಗುರುಮತ್ತು

(ಮುಂದೆ ಕಾಣುವದಿಲ್ಲ)

33

ಅದೇ ಹೋಬಳಿ ಅಂಕನಾಥಪುರದ ಅಂಕನಾಥೇಶ್ವರ ದೇವಸ್ಥಾನದ ದಕ್ಷಿಣ ಪಾರ್ಶ್ವದಲ್ಲಿ ನಟ್ಟ ಕಲ್ಲು.

ಪ್ರಮಾಣ 2′ × 1′ 6″.

[1] ವಿಜಯಸಂವತ್ಸರದಚೈ
[2] ತ್ರಶುದ ೫ ಆ | ತಂಮಪ್ಪಯ
[3] ನವರಕಾರ್ಯಕೆಕರ್ತರಾದ
[4] ಗುಡಿಸೆಟ್ಟಿಯುರುಹುಲಿಕ
[5] ಲ್ಸ್ತಳಅಂಕನಾಥದೇವರಿಗೆಸಲುವ
[6] ಅಂಕನಾಥಪುರ[ದ]ಲಿಆರಮನೆಗೆ
[7] ಕೊಂ . ಬಿಗ್ಗೆಬಿಟ್ಟಸ್ತಳಸುಂ
[8] ಕ . . ನ . ದಿಯಸೋಮ .
[9] . . ಕೊಟ್ಟದುತಪ್ಪಿದವರುವಾರಾ
[10] ಣಸಿಲಿಆಬಿ . . . .
[11] ನವಕೊಂದ[ಪಾ]ಪಕೆಹೋಹರು .

34

